ಹೇಳುತ್ತಿದ್ದೀರಿ. ಅವರಿಗೆ ಸಮರ್ಥಿಸಿಕೊಳ್ಳುವ ಶಕ್ತಿ ಇಲ್ಲ. ಎಷ್ಟು ಮೆತ್ತಗೆ ಮಾತನಾಡುತ್ತಾರೋ, ಎಷ್ಟು ಬೆಣ್ಣೆ ಹೊಡೆಯುತ್ತಾರೆ ಎಂಬುದು ಇದೆಲ್ಲಾ ಅನುಭವಿಸುತ್ತಿರುವ ನಮಗೆ ಗೊತ್ತು.

(ಗೊಂದಲ)

ಉಪಾಧ್ಯಕ್ಷರು : ರಾಮಸ್ವಾಮಿಯವರೆ, ತಾವು ಅರ್ಥ ಮಾಡಿಕೊಳ್ಳಬೇಕು, ನಾವು ಎಷ್ಟು ಸಾರಿ ತಮಗೆ ಹೇಳುವುದು. ತಾವು ಬೇರೆ ನಿಯಮದ ಅಡಿಯಲ್ಲಿ ಬರೆದುಕೊಟ್ಟರೆ ಅವಕಾಶ ನೀಡಲಾಗುವುದು ಎಂದು ಹೇಳಿದ್ದರೂ ಸಹ ನೀವು ಕೇಳುವುದಿಲ್ಲ ಎಂದರೆ ಹೇಗೆ? ಸದನವನ್ನು ನಡೆಸುವುದಾದರೂ ಹೇಗೆ? ಅವರು ಎಷ್ಟು ಹೊತ್ತು ಇದನ್ನು ಚರ್ಚೆ ಮಾಡುವುದು ಒಂದು ಕಾಲಮಿತಿ ಬೇಡವೇ?

ಶ್ರೀ ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಬಹಳ ಗಹನವಾದಂಥ ಚರ್ಚೆ ಇದು. ಈಗ ಸಹಕಾರ ಸಚಿವರು ಏನು ಹೇಳಿದರು, ಒಂದೂ ಸಂಘಗಳು ನೂರಕ್ಕೆ ನೂರು ವಸೂಲಾತಿ ಮಾಡಿಲ್ಲ ಎಂದು ಹೇಳಿದ್ದಾರೆ. ನೀವೇ ಅಭಿನಂದನಾ ಪತ್ರವನ್ನು ಕೊಟ್ಟಿರುವುದು, ನೂರಕ್ಕೆ ನೂರು ವಸೂಲಾತಿ ಆಗಿದೆ ಎಂದು ಹೇಳಿ ಸಹಕಾರ ಇಲಾಖೆಯವರು ಮತ್ತು ಎಚ್.ಡಿ.ಸಿ. ಬ್ಯಾಂಕ್‌ನವರು. 10-7-97ರಲ್ಲಿ ಅಭಿನಂದನಾಪತ್ರವನ್ನು ಕೊಟ್ಟಿರುವುದನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ ನೋಡಿ. ಇನ್ನೊಂದು ಏನು ಹೇಳಿದ್ದೀರಿ, ಒಂದು ಸಂಘದಲ್ಲಿ ಏಳು ಪರ್ಸೆಂಟ್ ವಸೂಲಾತಿ ಆಗಿದೆ ಅಷ್ಟೆ ಎಂದು. ನಾನು ಜವಾಬ್ದಾರಿಕೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ : ಈಗ ಆ ಚುನಾವಣೆಯನ್ನು ಮುಂದೂಡಬೇಕು, ಆ ಡೆಪ್ಯೂಟಿ ರಿಜಿಸ್ಟ್ರಾರ್‌ರವರನ್ನು ಸಸ್ಪೆಂಡ್‌ನಲ್ಲಿ ಇಡಬೇಕು.

(ಗೊಂದಲ)

ಉಪಾಧ್ಯಕ್ಷರು : ತಾವು ದಯಮಾಡಿ ಕೇಳಿ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಬೇರೆ ರೂಪದಿಂದ ಅವಕಾಶ ಮಾಡಿಕೊಡಲಾಗುವುದೆಂದು ಹೇಳಿದ್ದೇನೆ. ತಾವು ನೋಟೀಸ್‌ನ್ನು ಕಳುಹಿಸಬೇಕು ಅವಕಾಶ ಮಾಡಿಕೊಡುತ್ತೇವೆ. ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು.

ಅಂತರಾಷ್ಟ್ರೀಯ ಖ್ಯಾತಿಯ ವೈದ್ಯರಾದ ಡಾ: ನಾಗಲೋತಿ ಮಠರವರು ಕಿಮ್ಸ್ ನಿರ್ದೇಶಕರ ಹುದ್ದೆಗೆ ನೀಡಿದ ರಾಜೀನಾಮೆಯನ್ನು ಸರ್ಕಾರ ಅಂಗೀಕರಿಸಿರುವುದರ ಬಗ್ಗೆ.

+ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಅಂತರಾಷ್ಟ್ರೀಯ ಖ್ಯಾತಿಯ ವೈದ್ಯರಾದ ಡಾ: ನಾಗಲೋತಿ ಮಠರವರು ಕಿಮ್ಸ್ ನಿರ್ದೇಶಕರ ಹುದ್ದೆಗೆ ನೀಡಿದ ರಾಜೀನಾಮೆಯನ್ನು ಸರ್ಕಾರ ಅಂಗೀಕರಿಸಿರುವುದರ ಬಗ್ಗೆ ನಾನು ವೈದ್ಯಕೀಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿಯಲ್ಲಿನ ನಿರ್ದೇಶಕರಾದ ಡಾ॥ ನಾಗಲೋತಿಮಠ ಅವರು ತಮ್ಮ ವೈಯಕ್ತಿಕ ಕಾರಣಗಳ ಮೇರೆಗೆ ರಾಜೀನಾಮೆಯನ್ನು ನೀಡಿದ್ದು ಸದರಿ ರಾಜೀನಾಮೆಯನ್ನು ಸರ್ಕಾರ ರಾಜೀನಾಮೆ ನೀಡಿದ ದಿನಾಂಕದಿಂದಲೇ ಜಾರಿಗೆ ಬರುವಂತೆ ಅಂಗೀಕಾರ ಮಾಡಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ, ವೈಯಕ್ತಿಕ ಕಾರಣಗಳಿಗಾಗಿ ನಾಗಲೋತಿ ಮಠರವರು ಕೊಟ್ಟಂಥ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಅದು ರಾಜೀನಾಮೆಗೆ ಕಾರಣವಲ್ಲ. ಡಾ॥ ನಾಗಲೋತಿಮಠರವರು ಅಂತರಾಷ್ಟ್ರೀಯ ಖ್ಯಾತಿಯ ವೈದ್ಯರು. ಅಂತಹ ಒಬ್ಬ ವೈದ್ಯರನ್ನು ನಮ್ಮ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ನಿರ್ದೇಶಕರನ್ನಾಗಿ ಸರ್ಕಾರನೇಮಿಸಿತು. ಆ ಕಿಮ್ಸ್‌ನ ನಿರ್ದೇಶಕರಾಗಿ ನೇಮಿಸಿದ ನಂತರವೂ ಸಹಿತ ಮೂರು ತಿಂಗಳವರೆಗೆ ಯಾವುದೇ ಅಧಿಕಾರವನ್ನು ಕೊಡಲಿಲ್ಲ. ನಂತರ ಅವರು ಏನು ಬೇಡಿಕೆಗಳನ್ನು ಇಟ್ಟಿದ್ದರೋ ಆ ಸೌಕರ್ಯಗಳನ್ನು ಸಹ ಆ ಆಸ್ಪತ್ರೆಗೆ ಒದಗಿಸಲಿಲ್ಲ. ಅಷ್ಟೇ ಅಲ್ಲ, ಡಾ॥ ನಾಗಲೋತಿಮಠರವರು ತಮ್ಮ ಒಂದು ಚೌಕಟ್ಟಿನಲ್ಲಿಯೇ ಆ ಆಸ್ಪತ್ರೆಯನ್ನು ನಡೆಸುತ್ತಿದ್ದವರು. ಏಕೆಂದರೆ, ಕಳೆದ 15-20 ವರ್ಷಗಳಿಂದಲೂ ನಾವು ಈ ಕಿಮ್ಸ್ ಆಸ್ಪತ್ರೆಯನ್ನು ನೋಡುತ್ತಿದ್ದೇವೆ. ಇದು ನರಕಸದೃಶ್ಯವಾಗಿತ್ತು. ಅಲ್ಲಿ ರೋಗಿಗಳು ಹೋದರೆ ನರಕಕ್ಕೆ ಹೋದಂತೆ ಎಂಬ ಗಾದೆ ಮಾತು ನಮ್ಮ ಉತ್ತರ ಕರ್ನಾಟಕದಲ್ಲಿ ಇದೆ. ನಮ್ಮ ಉತ್ತರ ಕರ್ನಾಟಕದ ಅತ್ಯಂತ ದೊಡ್ಡ ಆಸ್ಪತ್ರೆ, ಬೇಕಾದಷ್ಟು ಸ್ಥಳಾವಕಾಶ ಇದೆ, ಅಂತಹ ಆಸ್ಪತ್ರೆಯನ್ನು ಒಂದು ದೊಡ್ಡ ಆಸ್ಪತ್ರೆಯನ್ನಾಗಿ ಬೆಳೆಸಬೇಕೆಂಬ ಉದ್ದೇಶ ಇಟ್ಟುಕೊಂಡು ಅದೇ ಸಂಸ್ಥೆಯಲ್ಲಿ ಕಲಿತಂಥ ಡಾ॥ ನಾಗಲೋತಿ ಮಠರವರು ನಿರ್ದೇಶಕರಾಗಿ ಬಂದಮೇಲೆ ಆ ಆಸ್ಪತ್ರೆ ಸಲುವಾಗಿ ಬಹಳಷ್ಟು ಕಾಳಜಿವಹಿಸಿ ಕೆಲಸವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದರು. ಅವರು ಇದ್ದಿದ್ದು ಕೇವಲ 16 ತಿಂಗಳು ಅಷ್ಟೆ. ಆ ಹದಿನಾರು ತಿಂಗಳಿನಲ್ಲಿ ಆ ಆಸ್ಪತ್ರೆಯಲ್ಲಿ ಒಂದು ಸ್ವಚ್ಚತೆಯನ್ನು ತೆಗೆದುಕೊಂಡು ಬಂದರು ಮತ್ತು ಅಲ್ಲಿದ್ದಂಥ ನೌಕರ ವರ್ಗ, ಮತ್ತು ವೈದ್ಯರಿಗೆ ಸರಿಯಾದಂಥ ವೇಳೆಗೆ ಬರುವಂಥ ಒಂದು ಕ್ರಮವನ್ನು ಅವರು ಕೈಗೊಂಡರು. ಈ ರೀತಿ ಆಗಿದ್ದರಿಂದ ಮತ್ತು ಅಲ್ಲಿ ಸುಧಾರಣೆ ಪ್ರಾರಂಭವಾದ ಕೂಡಲೇ ಅಲ್ಲಿ ಏನು ಪಟ್ಟ ಭದ್ರಾಹಿತಾಸಕ್ತಿಗಳು ಇದ್ದವು ಮತ್ತು ಆಹಾರ ಖರೀದಿಯಲ್ಲಿ ಮತ್ತು ರೋಗಿಗಳಿಗೆ ಆಹಾರ ನೀಡಿಕೆಯಲ್ಲಿ ಏನೊಂದು ಅವ್ಯವಹಾರ ಅಲ್ಲಿ ನಡೆಯುತ್ತಿತ್ತು ಅದೆಲ್ಲ ಬಂದ್ ಆಯಿತು. ಹೀಗಾಗಿ ಆಸ್ಪತ್ರೆಯಲ್ಲಿ ರಾತ್ರಿಹೊತ್ತು ಏನು ಕುಡಿತ ನಡೆಯುತ್ತಿತ್ತು, ಇತರ ಹಲವಾರು ದುಶ್ಚಟಗಳು ಏನು ಆ ಆಸ್ಪತ್ರೆಯಲ್ಲಿ ಆ ಆಸ್ಪತ್ರೆಯಲ್ಲಿ ನಡೆಯುತ್ತಿತ್ತೋ ಆ ಎಲ್ಲಾ ಕೆಟ್ಟ ವ್ಯವಹಾರಗಳು ಬಂದ್ ಆದತಕ್ಷಣ ಅಲ್ಲಿದಂಥ ಪಟ್ಟಭದ್ರಾ ಹಿತಾಸಕ್ತಿಗಳು ನಮ್ಮ ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ಡಾ॥ ನಾಗಲೋತಿ ಮಠರವರ ಮೇಲೆ ಗೂಬೆ ಕೂರಿಸಿದರು. ಅವರನ್ನು ಆ ಆಸ್ಪತ್ರೆಯಿಂದ ಹೊರ ಹಾಕಲಿಕ್ಕೆ ಹೋರಾಟ ಪ್ರಾರಂಭಿಸಿದರು. ಜೊತೆಗೆ ಮಾನಸಿಕವಾಗಿಯೂ ಅವರಿಗೆ ಹಿಂಸೆಯನ್ನು ನೀಡಿದರು. ಅಷ್ಟೇ ಅಲ್ಲ, ಅವರಿಗೆ ಧೈಹಿಕವಾಗಿ ಹಿಂಸೆಯನ್ನು ನೀಡಿದ್ದರಿಂದ ಅವರು ಸರ್ಕಾರಕ್ಕೆ ರಕ್ಷಣೆಯನ್ನು ಕೋರಿದರೂ ಸರ್ಕಾರ ಅವರಿಗೆ ಯಾವುದೇ ರಕ್ಷಣೆಯನ್ನು ಕೊಡಲಿಲ್ಲ. ಈ ರೀತಿಯ ಒತ್ತಡದ ಪ್ರಸಂಗಗಳಿಂದಾಗಿ ನಾವು ಒಬ್ಬ ಒಳ್ಳೆಯ ವೈದ್ಯರನ್ನು ಕಳೆದುಕೊಳ್ಳುವಂಥ

ಪ್ರಸಂಗ ಉದ್ಭವವಾಯಿತು. ಅವರು ಸರ್ಕಾರಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದು ವೈಯಕ್ತಿಕ ಕಾರಣಕ್ಕಲ್ಲ, ಅವರಿಗೆ ಅಲ್ಲಿ ಏನೊಂದು ಒತ್ತಡ ಪರಿಸ್ಥಿತಿ ಬಂದಿತ್ತು, ದೈಹಿಕವಾಗಿ ಅಲ್ಲಿ ಕೆಲವು ಪಟ್ಟಭದ್ರಾ ಹಿತಾಸಕ್ತಿಗಳು ಏನೊಂದು ಒತ್ತಡವನ್ನು ತೆಗೆದುಕೊಂಡು ಬಂದರು ಆ ದೃಷ್ಟಿಯನ್ನು ಇಟ್ಟುಕೊಂಡು ಅವರು ಮಾನಸಿಕವಾದ ಕ್ಷೋಭೆಗೆ ಒಳಗಾಗಿ ತಮಗೆ ರಕ್ಷಣೆ ಸಿಗುತ್ತಾ ಇಲ್ಲ ಎಂಬ ಮಾನಸಿಕ ಕ್ಷೋಭೆಯಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವಂಥ ಪ್ರಸಂಗ ಬಂತು. ಆದರೂ ಸರ್ಕಾರ ಆ ಒಂದು ರಾಜೀನಾಮೆಯನ್ನು ಸಲ್ಲಿಸುವಾಗಲೇ ಅವರನ್ನು ಕರೆಸಿ ವಿಚಾರ ಮಾಡಿ, ನೀವು ಏಕೆ ರಾಜೀನಾಮೆಯನ್ನು ಕೊಡುತ್ತಿದ್ದೀರಿ, ನಿಮ್ಮಂಥ ಒಳ್ಳೆಯ ವೈದ್ಯರು ಇಂತಹ ಆಸ್ಪತ್ರೆಯಲ್ಲಿ ಇರಬೇಕಾಗಿತ್ತು. ನೀವು ಅಲ್ಲಿ ಮುಂದುವರೆಯಿರಿ ಎಂದು ಅಭಯಹಸ್ತವನ್ನು ನೀಡಿ ಅವರಿಗೆ ರಕ್ಷಣೆ ಕೊಟ್ಟಿದ್ದರೆ ಬಹುಶಃ ನಾಗಲೋತಿ ಮಠ್‌ರವರು ಅಲ್ಲಿ ಮುಂದುವರಿಯುತ್ತಿದ್ದರು. ಮತ್ತು ಆ ಕಿಮ್ಸ್ ಆಸ್ಪತ್ರೆಯನ್ನು ಉತ್ತರ ಕರ್ನಾಟಕದ ಅತ್ಯಂತ ಉತ್ತಮ ಆಸ್ಪತ್ರೆ ಮಾಡುದಕ್ಕೆ ಅವರು ಪ್ರಯತ್ನವನ್ನು ಮಾಡುತ್ತಿದ್ದರು. ಅದಕ್ಕಾಗಿ ನಾನು ಇವತ್ತಿಗೂ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಡಾ॥ ನಾಗಲೋತಿ ಮಠ್‌ರವರು ಒಬ್ಬ ಒಳ್ಳೆಯ ವ್ಯಕ್ತಿ ಮತ್ತು ಆಡಳಿತಗಾರರು ಇವರನ್ನು ಮತ್ತೆ ನಿರ್ದೇಶಕರನ್ನಾಗಿ ಕರೆ ತರಬೇಕು. ಅವರು ತಮ್ಮ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಸರ್ಕಾರ ಒತ್ತಾಯ ಮಾಡಿ ಅವರ ಮನವೊಲಿಸಿ ಮತ್ತೆ ಅಲ್ಲಿಗೆ ನೇಮಕ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಆಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಡಾ॥ ನಾಗಲೋತಿ ಮಠ್‌ರವರು ಕಳೆದ 4ದಶಕಗಳಿಂದ ನಡೆದಂತಹ ಈ ಕರ್ನಾಟಕ ಮೆಡಿಕಲ್ ಕಾಲೇಜು ಎಂದು ಏನು ಹೇಳುತ್ತಿದ್ದಾರೆ. ಈ ಮೆಡಿಕಲ್ ಕಾಲೇಜನ್ನು ಹದಿನಾರು ತಿಂಗಳಲ್ಲಿ ಅಲ್ಲಿ ನಡೆಯುತ್ತಿದ್ದಂತಹ ಭ್ರಷ್ಟಾಚಾರ ಮತ್ತು ಅಲ್ಲಿ ಖರೀದಿ ಮಾಡುತ್ತಿದ್ದಂತಹ ಕಳಪೆ ಔಷಧಿಗಳು, ಮತ್ತು ಕಳ್ಳತನದಿಂದ ಔಷಧಿಗಳು ಹೊರಗಡೆ ಹೋಗುವಂಥಾದ್ದು ನಡೆಯುತ್ತಿತ್ತು ಅದಕ್ಕೆ ಅಲ್ಲಿಯ ಭ್ರಷ್ಟ ಅಧಿಕಾರಿಗಳು ಒಟ್ಟಾರೆ ಕೂಡಿಕೊಂಡು ಆ ಪ್ರಾಮಾಣಿಕ ಅಧಿಕಾರಿಯನ್ನು ಯಾವ ರೀತಿಯಾಗಿ ಹೊರಗೆ ಹಾಕಬೇಕೆನ್ನುವಂಥಾದ್ದು ಮತ್ತು ಅವರು ರಾಜೀನಾಮೆಯನ್ನು ಕೊಡುವಂತೆ ಏನು ಮಾಡಬೇಕೆನ್ನುವಂಥ ಮಟ್ಟದಲ್ಲಿ ಅಲ್ಲಿನ ಭ್ರಷ್ಟ ಅಧಿಕಾರಿಗಳು ಹಾಗೂ ಸಾರ್ವಜನಿಕರು ಕೂಡಿಕೊಂಡು ಡಾ॥ ನಾಗಲೋತಿ ಮಠ್‌ರವರ ಮೇಲೆ ಮೇ ತಿಂಗಳ 12ನೇ ತಾರೀಖಿನಂದು ಹೋದರು. ಆ ರೀತಿ ಅವರು ಹೋದಂತಹ ಸಂದರ್ಭದಲ್ಲಿ ಅವರು ರಾಜೀನಾಮೆಯನ್ನು ಕೊಟ್ಟರು. ಅವರು ರಾಜೀನಾಮೆಯನ್ನು ಕೊಟ್ಟಮೇಲೆ ಸಂಬಂಧಪಟ್ಟಂತಹ ಉಸ್ತುವಾರಿ ಸಚಿವರು ಹಾಗೂ ಲೋಕೋಪಯೋಗಿ ಸಚಿವರು ನಾವೆಲ್ಲರೂ ಕೂಡಿಕೊಂಡು ಅವರ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿದೆವು. ಅವರು ಕಿಮ್ಸ್‌ನಲ್ಲಿ ಇದ್ದಂತಹ 16 ತಿಂಗಳುಗಳ ಕಾಲಾವಧಿಯಲ್ಲಿ ಒಳ್ಳೆಯ ರೀತಿಯಲ್ಲಿ ಬದಲಾವಣೆಯಾಗಿದೆ. ಈಗ ಅದು ಒಂದು ಉತ್ತಮವಾದಂತಹ ಕೆ.ಎಂ.ಸಿ. ಯಾಗಿದೆ. ಉತ್ತರ ಕರ್ನಾಟಕಕ್ಕೆ ಒಂದು ದೊಡ್ಡ ಕೀರ್ತಿ ಬರಬೇಕು ಮತ್ತು ಜನರು ಬರಬೇಕೆಂದು ಆ ಒಂದು ವಾತಾವರಣವನ್ನು ನಿರ್ಮಿಸಿದಂತಹ ಡಾ॥ ನಾಗಲೋತಿ ಮಠ್‌ರವರನ್ನು ಉಸ್ತುವಾರಿ ಮಂತ್ರಿಗಳು ಹಾಗೂ ಲೋಕೋಪಯೋಗಿ ಮಂತ್ರಿಗಳು

ನಾವೆಲ್ಲ ಕೂಡಿಕೊಂಡು ಅವರಿಗೆ ಏನಾಗಿದೆ, ಏನಾಗಬೇಕು ಎಂದು ನಾವೆಲ್ಲರೂ ಒಟ್ಟಾರೆ ಕೇಳಿ ಕೊಂಡು ಹೋದ ಎರಡು ದಿವಸಗಳೊಳಗೆ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದಾರೆ. ಮೊದಲು ಅವರು ರಾಜೀನಾಮೆಯನ್ನು ಏಕೆ ಕೊಟ್ಟರು ಎಂಬುದನ್ನು ಕೇಳಬೇಕಾಗಿತ್ತು, ಏತಕ್ಕೋಸ್ಕರ ರಾಜೀನಾಮೆಯನ್ನು ಕೊಟ್ಟರು, ಯಾವ ರೀತಿಯಾಗಿ ರಾಜೀನಾಮೆಯನ್ನು ಕೊಟ್ಟರು, ಏಕೆ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಬೇಕೆನ್ನುವುದನ್ನು ಸ್ಥಳೀಯ ಶಾಸಕರನ್ನು ಮತ್ತು ಸ್ಥಳೀಯ ಜನರನ್ನು ಕೇಳಿಕೊಂಡು ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಇಲ್ಲಿ ಬಂದು ಮೀಟಿಂಗ್ ಮಾಡಿ, ಕೆ.ಎಂ.ಸಿ. ಯಲ್ಲೂ ಮೀಟಿಂಗ್ ಮಾಡಿ ಅವರ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದಂತಹ ಶಾಸಕರುಗಳಾಗಲಿ, ಸಚಿವರುಗಳಾಗಲಿ, ಅನಂತರ ಉಸ್ತುವಾರಿ ಸಚಿವರು ಬೆಂಗಳೂರಿನಲ್ಲಿ ಅವರ ರಾಜೀನಾಮೆಯನ್ನು ಸ್ವೀಕಾರ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಒಬ್ಬ ದೊಡ್ಡ ಅಧಿಕಾರಿ, ಒಬ್ಬ ದೊಡ್ಡ ವೈದ್ಯರು, ಉತ್ತರ ಕರ್ನಾಟಕದ ಕೆ.ಎಂ.ಸಿ. "ಕಿಮ್ಸ್" ಎಂದು ಏನು ಹೇಳುತ್ತೇವೆ, ಅಲ್ಲಿಗೆ ಅವರನ್ನು ಮತ್ತೆ ಪುನರ್ ನೇಮಕ ಮಾಡಿ ಅಲ್ಲಿ ಅವರನ್ನು ನಿರ್ದೇಶಕರು ಎಂದು ಮಾಡಿ ಆ ಭಾಗದ ದೊಡ್ಡದಾದ ಈ ದವಾಖಾನೆಯನ್ನು ಇನ್ನಷ್ಟು ಬೆಳೆಸಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಕಳೆದ ಒಂದು ತಿಂಗಳಿಂದ ಸಾರ್ವಜನಿಕರು ಸತತವಾಗಿ ಹೋರಾಟ ಮಾಡುತ್ತಿದ್ದಾರೆ. ಸಾರ್ವಜನಿಕರು ಸಹ ಅವರು ಮತ್ತೆ ಬರಬೇಕೆಂದು ಅವರನ್ನು ಪುನರ್ ನೇಮಕ ಮಾಡಿ ಎಂದು ಹೋರಾಟ ಮಾಡುತ್ತಿದ್ದಾರೆ. ಶ್ರೀ ಪಾಟೀಲ್ ಪುಟ್ಟಪ್ಪನವರು, ಬೇರೆ ಬೇರೆ ಸಂಘ ಸಂಸ್ಥೆಗಳು ಜನರು ಹೋರಾಟ ನಡೆಸಿದ್ದಾರೆ. ಆದುದರಿಂದ ಅವರನ್ನು ಪುನರ್ ನೇಮಕ ಮಾಡಿ ಆ "ಕಿಮ್ಸ್" ಅನ್ನು ಮತ್ತೆ ಉಚ್ಛ್ರಾಯ ಸ್ಥಿತಿಗೆ ತರಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

+ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ (ಧಾರವಾಡ) : ಮಾನ್ಯ ಉಪಾಧ್ಯಕ್ಷರೆ, ಡಾ|| ನಾಗಲೋತಿ ಮಠ್‌ರವರ ರಾಜೀನಾಮೆಯ ವಿಷಯದ ಇಡೀ ರಾಜ್ಯದ ಜನತೆ ಮತ್ತು ವೈದ್ಯಕೀಯ ಮಟ್ಟದಲ್ಲಿ ಬಹಳ ಚಿಂತನೆ ಮಾಡುವಂಥಾದ್ದು ಏಕೆಂದರೆ ಇವರು ಒಬ್ಬ ಸಾಮಾನ್ಯ ವೈದ್ಯರಲ್ಲ, ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಂತಹ ಏಷ್ಯಾದಲ್ಲಿ ಒಬ್ಬ ಪೆಥಾಲಜಿಸ್ಟ್ ಆಗಿ ಈಗಾಗಲೇ ಇವರು ಎಲ್ಲೆಲ್ಲಿ ಸೇವೆ ಮಾಡಿದ್ದಾರೆಂದರೆ ಜೆ.ಎನ್.ಎಂ.ಸಿ. ಯಲ್ಲಿ ಮಾಡಿದ್ದಾರೆ. ಇದು ಒಂದು ಉತ್ತಮವಾದ ಮೆಡಿಕಲ್ ಕಾಲೇಜಾಗಿ ಉಚ್ಛ ಸ್ಥಾನ ಸಿಗಬೇಕಾದರೆ ಇವರ ಸೇವೆ, ಕೊಡುಗೆ ಅಲ್ಲಿ ಇದೆ. ಮತ್ತೆ ಇವರು ಬಿಜಾಪುರದ ಬಿ.ಎಲ್.ಡಿಗೆ ಮೆಡಿಕಲ್ ಅಸೋಷಿಯೇಷನ್‌ನಿಂದ ಮನ್ನಣೆ ಸಿಗಲಿಲ್ಲ. ಇವರು ಅಲ್ಲಿಗೆ ಹೋಗಿ ಈ ಬಿ.ಎಲ್.ಡಿ. ವೈದ್ಯಕೀಯ ಕಾಲೇಜು ಏನಿದೆ. ಅದಕ್ಕೆ ಇವರು ತಮ್ಮ ಸೇವೆಯನ್ನು ಸಲ್ಲಿಸಿದರು. ಆ ಕಾಲೇಜಿಗೂ ಇವರು ದೊಡ್ಡ ಘನತೆಯನ್ನು ತಂದು ಕೊಟ್ಟರು. ಅದಕ್ಕೆ ಅವರು ರಾಷ್ಟ್ರೀಯ ಮಟ್ಟದಲ್ಲಿ, ವೈದ್ಯಕೀಯದಲ್ಲಿ ಅವಕಾಶವನ್ನು ಮಾಡಿಕೊಟ್ಟರು, ಅನಂತರ ಇವರು ಮೈಸೂರಿನ ಸುತ್ತೂರು ಮೆಡಿಕಲ್ ಕಾಲೇಜಿನಲ್ಲಿ ಸೇವೆ ಮಾಡುತ್ತಿದ್ದರು. ಇವರು ಯಾವ ದೃಷ್ಟಿಯಲ್ಲಿ ಕರ್ನಾಟಕದ ಮಹತ್ವವಾದ ಕೆ.ಎಂ.ಸಿಯನ್ನು ಇಡೀ ಕರ್ನಾಟಕ ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕ ಒಂದು ಪ್ರತಿಷ್ಠಿತ ದವಾಖಾನೆಯಾಗಿದೆ. ಇದು ಇಡೀ ಎಂಟು ಜಿಲ್ಲೆಯ ಜನರ ಸೇವೆ ಮಾಡುವಂತಹ ದವಾಖಾನೆಯಾಗಿದೆ. ಇದಕ್ಕೆ ಅವರನ್ನು ಏಕೆ ತಂದರು? ಹೇಗೆ ತಂದರೂ?

ಯಾವಾಗ ತಂದರು? ಅವರಾಗೆ ಏನಾದರೂ ಬಂದರಾ? ಇವರು ಅವರನ್ನು ಏನಾದರೂ ಕೇಳಿಕೊಂಡಿದ್ದರಾ? ಇವರನ್ನು ಒಬ್ಬ ಪ್ರತಿಷ್ಠಿತ ಡಾಕ್ಟರ್ ಎಂದು ಅಲ್ಲಿಗೆ ತೆಗೆದುಕೊಂಡು ಬಂದರು. ಆ ರೀತಿ ಅವರನ್ನು ತೆಗೆದುಕೊಂಡ ಮೇಲೆ ಅವರಿಗೆ ಸರಿಯಾದಂತಹ ಅಧಿಕಾರವನ್ನು ಕೊಡಲೇ ಇಲ್ಲ. ಅನೇಕ ದಿವಸಗಳವರೆಗೆ ಅವರ ಅಧಿಕಾರದ ಸ್ಥಾನ ಏನಿದೆ. ಅಲ್ಲಿ ಅವರಿಗೆ ಏನು ಫ್ರೀ ಹ್ಯಾಂಡ್ ಬೇಕಾಗಿತ್ತು. ಒಂದು ಸ್ವಾಯತ್ತ ಸಂಸ್ಥೆ ಎಂದು "ಕಿಮ್ಸ್" ಅನ್ನು ಮಾಡಿದ ಮೇಲೆ ಒಬ್ಬ ನಿರ್ದೇಶಕರಿಗೆ ಏನು ಫ್ರೀ ಹ್ಯಾಂಡ್ ಬೇಕಾಗಿತ್ತು, ಅದನ್ನು ಇವರು ಸರಿಯಾಗಿ ಕೊಡಲಿಲ್ಲ. ನಾವು ಈ ವಿಷಯವನ್ನು ಸದನದಲ್ಲಿ ವಿಚಾರ ಮಾಡಿದ್ದೇವೆ, ಚರ್ಚೆ ಮಾಡಿದ್ದೇವೆ. ಇದಾದ ನಂತರವೂ ಅವರಿಗೆ ಸರಿಯಾದಂತಹ ಸ್ಥಾನವನ್ನು ಕೊಡದೇ ಇದ್ದರೂ ಅವರು ಮನ ನೊಂದು ಕೆಲಸ ಮಾಡುತ್ತಿದ್ದರು. ಇದು ಉತ್ತರ ಕರ್ನಾಟಕಕ್ಕೆ ಅಲ್ಲ, ಇಡೀ ದೇಶದಲ್ಲೇ ಬೆಸ್ಟ್ ಕಾಲೇಜ್ ಆಗಬೇಕಾಗಿದೆ, ಇಲ್ಲಿ ಹವಾ ಕೆಟ್ಟಿದೆ, ಈ ಹವಾವನ್ನು ಸರಿಪಡಿಸಬೇಕಾಗಿದೆ. ಇದನ್ನು ಸರಿ ಮಾಡಿದರೆ ಇದು ಇಡೀ ದೇಶದಲ್ಲೇ ಉತ್ತಮವಾದ ಕಾಲೇಜ್ ಆಗುತ್ತದೆಂದು ಅವರು ಹೇಳುತ್ತಿದ್ದರು. ನಾನು ಇಲ್ಲಿ ಕಲಿತಿದ್ದೇನೆ, ಇಲ್ಲಿ ಉತ್ತಮ ಮಕ್ಕಳು ಇದ್ದಾರೆ, ಉತ್ತರ ಕರ್ನಾಟಕದಲ್ಲಿ ಒಳ್ಳೆ ಒಳ್ಳೆಯ ವೈದ್ಯರಗಳಾಗಬೇಕಾಗಿದೆ. ಆ ದೃಷ್ಟಿಯಿಂದ ಇಲ್ಲಿ ಒಳ್ಳೆಯ ವೈದ್ಯರುಗಳನ್ನು ತಯಾರು ಮಾಡಬೇಕಾಗಿದೆ ಎಂದು ಹೇಳಿದರು. ಇಂತಹ ಒಂದು ವೈದ್ಯಕೀಯ ಕಾಲೇಜ್‌ನಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯವರು ಮತ್ತು ಲೋಕೋಪಯೋಗಿ ಮಂತ್ರಿಯವರು ಮತ್ತು ನಾವೆಲ್ಲ ಶಾಸಕರುಗಳು ಕೂಡ ಮೀಟಿಂಗ್ ಮಾಡಿದ್ದೇವೆ. ಡಾ॥ ಎಂ. ಶಂಕರ್‌ನಾಯಕ್‌ರವರು ಕೂಡ ಬಹಳ ಸಹಾಯ ಮಾಡುತ್ತೇವೆಂದು ಹೇಳಿಕೊಂಡು ಅಲ್ಲಿಗೆ ಬಂದು ಒಂದು ಮೀಟಿಂಗ್ ಮಾಡಿ ಅಲ್ಲಿ ಏನು ನಡೆದಿದೆ ಎಂಬ ಎಲ್ಲಾ ವಿಚಾರಗಳನ್ನು ಕೇಳಿಕೊಂಡು ಅದಕ್ಕೆ ಸರಿಯಾದಂತಹ ಉತ್ತರವನ್ನು ಕೊಟ್ಟಮೇಲೆ ಅಲ್ಲಿ ಇರುವಂತಹ ಅಧಿಕಾರಿಗಳು ಸರಿಯಾದಂತಹ ಉತ್ತರವನ್ನು ಕೊಟ್ಟ ಮೇಲೆ ಅವರು ಸನ್ಮಾನ್ಯ ಉಸ್ತುವಾರಿ ಮಂತ್ರಿಗಳಾದಂತಹ ಶ್ರೀ ಎಸ್.ಎಸ್. ಪಾಟೀಲ್‌ರವರು ಮಾನ್ಯ ಮುಖ್ಯಮಂತ್ರಿಯವರಿಗೆ ಸರಿಯಾದಂತಹ ವರದಿಯನ್ನು ಕಳುಹಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದರು. ಆದರೆ ಈ ವರದಿ ಸರಿಯಾದಂತಹ ವೇಳೆಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮುಟ್ಟಿತ್ತೋ ಅಥವಾ ಇಲ್ಲವೋ? ನನಗೆ ಗೊತ್ತಿಲ್ಲ. ಅವರಿಗೂ ಸಹ ಡಾ॥ ನಾಗಲೋತಿ ಮಠ್‌ರವರ ಕೆಲಸ ಮತ್ತು ಅವರು ತೆಗೆದುಕೊಂಡ ಶ್ರಮ, ಅವರ ಮೇಲೆ ಇದ್ದಂತಹ ಪ್ರೀತಿ ಅಭಿಮಾನ ಖ್ಯಾತಿ ಬಗ್ಗೆ ಮನವರಿಕೆಯಾಗಿದೆ. ಅಂತಹ ಒಬ್ಬ ಖ್ಯಾತಿಯ ಡಾಕ್ಟರ್ ಆಗಿದ್ದಾರೆ. ಡಾ॥ ಶಂಕರ್‌ನಾಯಕ್ ರವರಿಗೂ ನಾನು ಫೋನ್ ಮಾಡಿ ಹೇಳಿದ್ದೆ. ಇವರಿಗೆ ಹೊರಗಿನಿಂದ ಅನ್ಯಾಯವಾಗುತ್ತಿದೆ, ಅವರಿಗೆ ಅಡಳಿತ ಮಾಡುವುದಕ್ಕೆ ತೊಂದರೆಯಾಗುತ್ತಿದೆ, ಹಿಂಸೆಯಾಗುತ್ತಿದೆ. ತಾವು ಇಲ್ಲಿಗೆ ಬರಬೇಕೆಂದು ನಾನು ಅವರಿಗೆ ವಿನಂತಿ ಮಾಡಿಕೊಂಡಿದ್ದೆ. ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ಬೇಕಾದರೆ ಕೇಳಬಹುದು. ದಯಮಾಡಿ ತಾವು ಅಲ್ಲಿಗೆ ಬರಬೇಕು ಅಂತಹ ಒಬ್ಬ ವೈದ್ಯರಿಗೆ ನೀವು ಸಹಾಯ ಮಾಡಬೇಕು. ನೀವು ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ಇದು ಉತ್ತರ ಕರ್ನಾಟಕದ ಪ್ರತಿಷ್ಠಿತ ದವಾಖಾನೆಯಾಗಿದೆ. ಡಾ॥ ನಾಗಲೋತಿ ಮಠ್‌ರವರು ಸಾಮಾನ್ಯ ಡಾಕ್ಟರ್ ಅಲ್ಲ, ಅವರು ಒಬ್ಬ ಉತ್ತಮವಾದಂತಹ ಡಾಕ್ಟರ್ ಆಗಿದ್ದಾರೆ.

ಅವರಿಗೆ ಸೇವೆ ಮಾಡುವಂಥಾದ್ದಕ್ಕೆ ಅವಕಾಶ ಇದೆ. ಇಂತಹ ಒಬ್ಬ ಡಾಕ್ಟರ್‌ಗೆ ಬಲತ್ಕಾರವಾಗಿ ಹಿಂಸೆ ಮಾಡುವಂಥಾದ್ದು ಆದಮೇಲೆ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರ ರಾಜೀನಾಮೆಯನ್ನು ಕೊಡುವಂಥಾದ್ದು ಖರೆ ಎಂದು ಗೊತ್ತಾದ ಮೇಲೆ ಅವರನ್ನು ಕರೆಸಿ, ಏಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆಂಬುದನ್ನು ವಿಚಾರ ಮಾಡಬೇಕಾಗಿತ್ತು. ಇವತ್ತು ಸರ್ಕಾರ ಇದರ ಬಗ್ಗೆ ಬಹಳಷ್ಟು ಅನ್ಯಾಯ ಮಾಡಿದೆ. ಡಾ॥ ಎಸ್.ಜೆ. ನಾಗಲೋತಿ ಮಠ್‌ರವರಿಗೆ ಉತ್ತರ ಕರ್ನಾಟಕದಲ್ಲಿ ಅಲ್ಲ, ಇಡೀ ರಾಷ್ಟ್ರದಲ್ಲಿ ಖ್ಯಾತಿ ಇದೆ. ಇವರನ್ನು ಪುನರ್ ನೇಮಕ ಮಾಡಿಕೊಂಡು ಇವರ ಸೇವೆ ಉತ್ತರ ಕರ್ನಾಟಕಕ್ಕೆ ಸಿಗುವಂತೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳತ್ತೇನೆ.

6.10 ಪಿ.ಎಂ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಬಹಳ ಮಾತನಾಡುವಷ್ಟೇನೂ ವಿಶೇಷತೆ ಇಲ್ಲ. ಇನ್‌ಫ್ಯಾಕ್ಟ್ ಸಂಬಂಧಪಟ್ಟ ಸಚಿವರೇ ಇದರ ಬಗ್ಗೆ ಚಿಂತೆ ಮಾಡಬೇಕಾಗಿತ್ತು. 'ಕಿಮ್ಸ್' ಆಸ್ಪತ್ರೆಗೆ ಅವರನ್ನು ಉಳಿಸಿಕೊಳ್ಳುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಒಂದು ರೀತಿ ಕಿರುಕುಳ ತಡೆಯಲಾರದೇ, ಮಾನಸಿಕ ಹಿಂಸೆಯಿಂದ ಅವರು ರಾಜೀನಾಮೆ ಕೊಟ್ಟು ಹೋದರು ಎನ್ನುವಂಥಾದ್ದು ಇವತ್ತು ಜಗತ್ ಜಾಹೀರಾಗಿರುವಂತಹ ಸಂಗತಿಯಾಗಿದೆ. ತಮಗೆ ಗೊತ್ತಿರುವ ಹಾಗೆ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರವೇ ಒಪ್ಪಿಕೊಂಡಿರುವಂತೆ, ಅಲ್ಲಿ ಅಭಿವೃದ್ಧಿಗೋಸ್ಕರ 4 ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಲಿಲ್ಲ. ನಿರ್ದೇಶಕರು ಎಂದು ಹೇಳಿ ಅವರನ್ನು ಅಲ್ಲಿಗೆ ಕರೆದುಕೊಂಡು ಬಂದು ಕುಳ್ಳಿರಿಸಿದಿರಿ. ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯವನ್ನು ಅವರು ಮಾಡಲು ಬೇಕಾದಂತಹ ಅಧಿಕಾರವನ್ನು ನೀಡುವ ಬಗ್ಗೆ ತಾವು ಗಮನ ಹರಿಸಲಿಲ್ಲ ಅಥವಾ ಆ ದಿಸೆಯಲ್ಲಿ ಪ್ರಯತ್ನ ಮಾಡಲಿಲ್ಲ. ಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಎಂ.ಸಿ.ಐ. ಕೆಲವೊಂದು ಷರತ್ತುಗಳನ್ನು ವಿಧಿಸಿತು. ಹೊಸ ಉಪಕರಣಗಳನ್ನು ತರುವುದು, ಹೊಸ ವಿಭಾಗಗಳನ್ನು ತೆರೆಯುವುದು, ಮೇಲ್ದರ್ಜೆಗೆ ಏರಿಸುವುದು, ಸಿಬ್ಬಂದಿ ಮುಂತಾದ ಅವರ ಯಾವುದೇ ಷರತ್ತುಗಳನ್ನೂ ಫುಲ್‌ಫಿಲ್ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಲಿಲ್ಲ. ಹಾಗಾಗಿ ಅವರ ರಾಜೀನಾಮೆಯನ್ನು ಬಹಳ ತರಾತುರಿಯಿಂದ ತಾವು ಒಪ್ಪಿಕೊಂಡಿರಿ. ಈಗೇನಾದರೂ ಆ ತರಹ ಒಳ್ಳೆಯ ಸಂಸ್ಥೆಗೆ ಈ ರೀತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿರುವಂತಹ ಇಂತಹ ವ್ಯಕ್ತಿಯ ಉಪಯೋಗ ಇಂತಹ ಆಸ್ಪತ್ರೆಗಳಿಗೆ ಬೇಕು ಎನ್ನುವಂತಹ ಕಾಲದಲ್ಲಿ ತಾವು ಅವರ ಮನವೊಲಿಸಿ ಅವರ ರಾಜೀನಾಮೆಯನ್ನು ಮತ್ತೆ ವಾಪಸ್ ಪಡೆದುಕೊಂಡು ನೇಮಕ ಮಾಡುವುದರಿಂದ ಆ ಉತ್ತರ ಕರ್ನಾಟಕ ಭಾಗದ ಜನರಿಗೆ ಒಂದು ಗೌರವ ಬರುತ್ತದೆ. ಈ ಕ್ಷೇತ್ರದಲ್ಲಿ ದುಡಿಯುವವರಿಗೂ ಒಂದು ಗೌರವ, ಸ್ಥಾನಮಾನ ಇದೆ ಎನ್ನುವಂತಹ ಒಂದು ಅಭಿಪ್ರಾಯ ಬರುತ್ತದೆ. ಈಗಾಗಲೇ ತಮಗೆ ಗೊತ್ತಿದೆ, ಯಾರ್‍ಯಾರು ಇಂಥಿಂಥ ಬುದ್ಧಿವಂತರುಗಳಿದ್ದಾರೆ, ತಜ್ಞರುಗಳಿದ್ದಾರೋ, ಅಂತಹವರೆಲ್ಲಾ ಇಲ್ಲಿಂದ ಪಲಾಯನವಾಗಿ ಹೊರ

ದೇಶಕ್ಕೆ ಹೋಗುವಂತಹ ಈ ಸಂದರ್ಭದಲ್ಲಿ ಇಂತಹ ಒಬ್ಬ ಏಷ್ಯಾದಲ್ಲೇ ಒಂದು ರೀತಿಯ ಪ್ರತಿಷ್ಠೆ ಹಾಗೂ ಗೌರವವನ್ನು ಉಳಿಸಿಕೊಡುವಂತಹ ವ್ಯಕ್ತಿಯನ್ನು ಉಳಿಸಿಕೊಳ್ಳಲಿಕ್ಕಾಗಲಿಲ್ಲ ಎನ್ನುವುದಾದರೆ, ಆ ರೀತಿ ಯಾವುದೇ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಅಧಿಕಾರಿಗಳು ಇದೇ ಸ್ಥಿತಿಗೆ ಕ್ರಮೇಣ ಬರುತ್ತಿದ್ದಾರೆ. ತಾವು ಬಹಳ ದಕ್ಷತೆಯಿರುವ, ಇದರ ಬಗ್ಗೆ ಕಳಕಳಿಯಿರುವ ಮಂತ್ರಿಗಳಾಗಿದ್ದೀರಿ. ಇದು ನಮಗೆ ಉಪಕಾರ ಮಾಡುವುದು, ಅಥವಾ ನಾಗಲೋತಿಮಠ್ ಅವರಿಗೆ ಉಪಕಾರ ಮಾಡುವುದಲ್ಲ. ಇದರ ಉಪಕಾರ ಆ ಭಾಗದ ಜನರಿಗೆ ಆಗುತ್ತದೆ. ಅವರನ್ನು ಮನವೊಲಿಸಿ ರೀಇನ್‌ಸ್ಟೇಟ್ ಮಾಡಿಕೊಳ್ಳುವಂತಹ ಪ್ರಯತ್ನವನ್ನೇನಾದರೂ ಸರ್ಕಾರ ಮಾಡಬಹುದೇ? ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ಅದರ ಬಗ್ಗೆ ನಾವೇನಾದರೂ ಹೇಳಬಹುದು.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ : ಮಾನ್ಯ ಉಪಾಧ್ಯಕ್ಷರೇ, ಅವರನ್ನು ಮರುನೇಮಕ ಮಾಡುವುದರಿಂದ ಸರ್ಕಾರದ ಪ್ರತಿಷ್ಠೆಯೂ ಸಹಿತ ಹೆಚ್ಚುತ್ತದೆ. ಅಂತಹ ಒಳ್ಳೆಯವರಿಗೆ ಅವಕಾಶ ಕೊಡುವುದು ಒಳ್ಳೆಯದು.

ಉಪಾಧ್ಯಕ್ಷರು : ಮಾನ್ಯ ಬೆಲ್ಲದ್‌ರವರೇ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ,...

ಉಪಾಧ್ಯಕ್ಷರು : ಇದರ ಬಗ್ಗೆ ನಾನೂ ಒಂದೆರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ತಾವು ಕೇಳಿ. ಅದು ಅಲ್ಲಿಯ ಒಂದು ಪ್ರತಿಷ್ಠಿತವಾದಂತಹ ಮೆಡಿಕಲ್ ಕಾಲೇಜಾಗಿದೆ. ಆ ಕಾಲೇಜಿನಲ್ಲಿ ತಾವು ನೇಮಕಾತಿ ಮಾಡಿಕೊಂಡ ನಾಗಲೋತಿಮಠ್‌ರವರು ಇಡೀ ಭಾರತ ದೇಶದಲ್ಲೇ ಒಬ್ಬ ಪ್ರತಿಭಾನ್ವಿತ ಡಾಕ್ಟರ್ ಆಗಿದ್ದಾರೆ. ಇದರಲ್ಲಿ ಎರಡನೇ ಮಾತೇ ಇಲ್ಲ ಆ ದೃಷ್ಟಿಯಿಂದ ಅವರಿಗೆ ಅವಕಾಶ ಕೊಟ್ಟಾಗ, ಅದನ್ನು ಸುಧಾರಣೆ ಮಾಡಲಿಕ್ಕೆ ಬಹಳ ದಿವಸಗಳವರೆಗೆ ಸರ್ಕಾರ ಫಂಡ್ ಅನ್ನು ಬಿಡುಗಡೆ ಮಾಡಲಿಲ್ಲ. ಅದರ ಬಗ್ಗೆ ಅಸೆಂಬ್ಲಿಯಲ್ಲಿ ಚರ್ಚೆಯೂ ಆಯಿತು. ಅವರು ತಾವಾಗಿಯೇ ಕಾಲೇಜ್ ಬಿಟ್ಟು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿ ಅವರು ರಾಜೀನಾಮೆ ಕೊಡಬೇಕಾಯಿತ ಎಂದು ಅಲ್ಲಿ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಈ ರೀತಿ ಆಗಬಾರದು. ಸಾಧ್ಯವಿದ್ದರೆ ಮತ್ತೆ ಸರ್ಕಾರ ಮನಸ್ಸು ಮಾಡಿ ಅವರನ್ನು ಪುನರ್ ನೇಮಕ ಮಾಡಿಕೊಳ್ಳಬೇಕೆಂದು ನಾನೂ ಈ ಸಂದರ್ಭದಲ್ಲೇ ಮಾನ್ಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಿಮಗೆ ನಾನೂ ಕೂಡ ಬೆಂಬಲಿಸುತ್ತೇನೆ. ನಿಜವಾಗಿಯೂ ಒಂದು ಇನ್ವೆಸ್ಟಿಟ್ಯೂಷನ್ ನಡೆಯಬೇಕಾದರೆ ಒಳ್ಳೆಯವರ ಬೇಕಾಗುತ್ತದೆ.

+ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಸರ್ಕಾರದ ಚಿಂತನೆ ಏನಿದೆ? ಸರ್ಕಾರ ಇದರ ಬಗ್ಗೆ ಏನು ಮಾಡಿದೆ ಎಂಬುದನ್ನು ತಿಳಿದುಕೊಂಡು ತಾವು ಆ ಮಾತ ಹೇಳಿದ್ದರೆ ಚೆನ್ನಾಗಿತ್ತೇನೋ ಎಂದು ನನಗನಿಸುತ್ತದೆ. 'ಕಿಮ್ಸ್' ಗೆ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಬೇಕಾಗಿತ್ತೋ ಅದರಲ್ಲಿ ಒಂದು ಪೈಸೆಯನ್ನೂ ಕೂಡ ಸರ್ಕಾರ ಕಡಿಮೆ ಮಾಡಿಲ್ಲ. ಆ ಬಗ್ಗೆ ನನ್ನ ಹತ್ತಿರ ದಾಖಲೆಗಳೆಲ್ಲಾ ಇವೆ.

ಉಪಾಧ್ಯಕ್ಷರು : ನಾನು ಎಲ್ಲವನ್ನೂ ತಿಳಿದುಕೊಂಡೇ ಆ ರೀತಿ ಮಾತನಾಡಿದ್ದೇನೆ. ಇಲ್ಲಿ ತಾವು ಹಾಗೆಲ್ಲಾ ಹೇಳಬಾರದು. ಅದರ ಬಗ್ಗೆ ಇಲ್ಲಿ ಎಲ್ಲಾ ಚರ್ಚೆಯಾಗಿದೆ. ನಾವೇನೂ ತಿಳಿಯದೇ ಮಾತನಾಡಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ತೀರಾ ಜಾಸ್ತಿಯಾಯಿತು. ನಾಗಲೋತಿಮಠ್‌ರವರ ಜೊತೆಗೂ ಕೂಡ ತಾವು ಇದೇ ರೀತಿ ನಡೆದುಕೊಂಡಿದ್ದೀರಿ ಎಂದಾಯಿತು. ಅಧಿಕಾರದ ಮದ ಏನಿದೆ, ಆ ಸ್ಥಾನದಿಂದ ನೀವು ಏನೂ ಬೇಕಾದರೂ ಮಾಡಬಹುದು ಎಂದೆನಿಸುತ್ತದೆ. ಇದೇ ರೀತಿ ನೀವು ಅವರ ಹತ್ತಿರವೂ ಕೂಡ ನಡೆದುಕೊಂಡಿದ್ದೀರಿ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಆ ರೀತಿ ಮಾತನಾಡಬಾರದು.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಬೇಜವಾಬ್ದಾರಿತನದ ಪರಮಾವಧಿ.

(ಗೊಂದಲ)

ಉಪಾಧ್ಯಕ್ಷರು : ತಾವು, ನನಗೆ ತಿಳಿದುಕೊಂಡು ಮಾತನಾಡಬೇಕಾಗಿತ್ತು ಎಂದೇನು ಹೇಳಿದಿರಿ, ಆ ರೀತಿ ಹೇಳುವುದು ಸರಿಯಲ್ಲ. ಸದನದಲ್ಲಿ ಅಲ್ಲಿಗೆ ಹಣ ಬಿಡುಗಡೆ ಮಾಡಿ ಎಂದು ಅನೇಕ ಸಲ ಚರ್ಚೆಯಾಗಿದೆ. ಆದರೂ ತಾವು ಅಲ್ಲಿಗೆ ಹಣ ಬಿಡುಗಡೆ ಮಾಡಿಲ್ಲ. ಎಷ್ಟೋ ದಿವಸಗಳವರೆಗೂ ತಾವು ಹಣ ಬಿಡುಗಡೆ ಮಾಡದೇ, ತಾವು ಈ ರೀತಿ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದಲ್ಲಿ ಏನು ನಡೆಯುತ್ತದೆ ಎನ್ನುವುದು ನಿಮಗೂ ಗೊತ್ತು. ಎಲ್ಲಾ ಗೊತ್ತಿರುವ ನಿಮಗೇ ಆ ರೀತಿ ಉತ್ತರ ಬರಬೇಕಾದರೆ ಬೇರೆ ಸದಸ್ಯರ ಗತಿ ಏನು?

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಶ್ರೀ ನಾಗಲೋತಿ ಮಠ್‌ರವರು ತಮಗೆ ಅಲ್ಲಿ ಏನು ತೊಂದರೆಯಾಗಿದೆ ಎಂದು ಸಬ್ಜೆಕ್ಟ್ ಕಮಿಟಿ ಮುಂದೆ ಬಂದು ಹೇಳಿದ್ದಾರೆ. ಮಂತ್ರಿಗಳು ಆ ಬಗ್ಗೆ ಗೊತ್ತಿಲ್ಲವೆಂದು ಹೇಳಿದರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ನಾಗಲೋತಿಮಠ್‌ರವರು ತಮ್ಮ ರಾಜೀನಾಮೆ ಕೊಡುವುದಕ್ಕೆ ಮುಂಚೆ ಸಬ್ಜೆಕ್ಟ್ ಕಮಿಟಿ ಮುಂದೆ ಹಾಜರಾಗಿದ್ದಾರೆ. ಅಲ್ಲಿ ಅವರು ಸಮಿತಿಗೆ ಎಲ್ಲಾ ವಿವರಗಳನ್ನೂ ಕೂಡ ಕೊಟ್ಟಿದ್ದಾರೆ. ಅಲ್ಲಿ ಅವರಿಗೆ ಎಷ್ಟು ಕಷ್ಟವಾಗಿದೆ ಎಂದು ಅವರು ನಮ್ಮ ಮುಂದೆ ಹೇಳಿದ್ದಾರೆ. ಆದಾದ ನಂತರ ಈ ರೀತಿ ಆಗಿದೆ. ರಾಜೀನಾಮೆ ಕೊಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ ಎಂದು ಅವರು ನನ್ನ ಹತ್ತಿರ ಬಂದು ಹೇಳಿದ್ದಾರೆ. ಅವರ ರಾಜೀನಾಮೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾವು ವಿಷಯ ಸಮಿತಿಯಲ್ಲಿ ನಿರ್ಣಯವೊಂದನ್ನು ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈಗಲಾದರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ತಾವು ಕ್ಷಮಿಸಬೇಕು. ತಾವು ಆ ಪೀಠದಿಂದ ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುತ್ತದೆ, ಅದು ಆಜ್ಞೆಯಾಗುತ್ತದೆ. ನಾನು ಹೇಳುವಂಥದ್ದು ಏನೆಂದರೆ, ಸರ್ಕಾರದ ಹಣ ಬಿಡುಗಡೆಯಾಗಿಲ್ಲ ಎನ್ನುವುದರಲ್ಲಿ ತಿರುಳಿಲ್ಲ.

ಉಪಾಧ್ಯಕ್ಷರು : ತಾವು ಮತ್ತೆ ಅದೇ ಉತ್ತರವನ್ನು ಹೇಳುತ್ತಿದ್ದೀರಿ. ಅದರ ಬಗ್ಗೆ ಕಡತ ತರಿಸಿ ನೋಡೋಣ. ಅನೇಕ ಸಲ ಇಲ್ಲಿ ಹಣ ಬಿಡುಗಡೆ ಮಾಡಿಲ್ಲವೆಂದು ಚರ್ಚೆಯಾಗಿದೆ. ನೀವು ಅದನ್ನು ಇಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ಯಾವ್ಯಾವ ಇನ್‌ಸ್ಟಾಲ್‌ಮೆಂಟ್ ಯಾವ್ಯಾವ ಪ್ರಕಾರ ಬಿಡುಗಡೆಯಾಗಬೇಕಾಗಿತ್ತು? ಹೇಗೆ ಬಿಡುಗಡೆಯಾಗಬೇಕಾಗಿತ್ತು? ಆ ಪ್ರಕಾರ ಇಲ್ಲಿ ಸರಿಯಾದ ದಾರಿಯಲ್ಲಿ ಬಿಡುಗಡೆಯಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಅಪಾಯಿಂಟ್‌ಮೆಂಟ್ ಆದದ್ದು ಯಾವಾಗ? ಅವರಿಗೆ ಹಣ ಬಿಡುಗಡೆ ಮಾಡಿದ್ದು ಯಾವಾಗ? ನೀವು ಆಡಳಿತ ಮಂಡಳಿಗೆ ಯಾವಾಗ ಅಧಿಕಾರ ಕೊಟ್ಟಿರಿ ಆ ತಾರೀಖಿನ್ನು ಮಾನ್ಯ ಮಂತ್ರಿಗಳು ಇಲ್ಲಿ ಹೇಳಬೇಕು.

ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಾಗಲೋತಿ ಮಠ್‌ರವರು ಹೋದ ವರ್ಷ ಅಂದರೆ 1996ನೇ ಇಸವಿ ಮಾರ್ಚಿ ತಿಂಗಳಲ್ಲಿ 'ಕಿಮ್ಸ್' ಡೈರೆಕ್ಟರ್ ಆಗಿ ಅಪಾಯಿಂಟ್ ಆದರು. ಅವರು ಅಪಾಯಿಂಟ್ ಆದಾಗ ಹುಬ್ಬಳ್ಳಿ ಮತ್ತು ಬಳ್ಳಾರಿ ಆಟಾನಮಸ್ ಸ್ಟೇಟಸ್ ಅನ್ನು ಹೊಂದಿರಲಿಲ್ಲ. ಜೂನ್ ತಿಂಗಳಿನಲ್ಲಿ ಅದರ ಬೈಲಾವನ್ನು ಅಪ್ರೂವ್ ಮಾಡಿ ಹುಬ್ಬಳ್ಳಿ ಮತ್ತು ಬಳ್ಳಾರಿಯ ಮೆಡಿಕಲ್ ಕಾಲೇಜುಗಳಿಗೆ ಅಧಿಕಾರವನ್ನು ನಾವು ಹೋದ ವರ್ಷದಲ್ಲಿ ಕೊಟ್ಟಿದ್ದೇವೆ.

ಉಪಾಧ್ಯಕ್ಷರು : ಅಂದರೆ ನಾಲ್ಕು ತಿಂಗಳ ನಂತರ ನೀವು ಅವರಿಗೆ ಅಧಿಕಾರ ಕೊಟ್ಟಿದ್ದೀರಿ.

ಡಾ|| ಎಂ. ಶಂಕರ್ ನಾಯಕ್ : ಅದರ ಬಗ್ಗೆ ಇನ್ನಷ್ಟು ಹೇಳುತ್ತೇನೆ. ಬೈಲಾ ಅಪ್ರೂವ್ ಆಗುವುದಕ್ಕಿಂತ ಮುಂಚಿತವಾಗಿಯೇ ಅವರನ್ನು ಡೈರೆಕ್ಟರ್ ಎಂದು ಅಪಾಯಿಂಟ್ ಮಾಡಿಕೊಂಡಿದ್ದೆವು. ನಾನು ಮಂತ್ರಿಯಾಗಿದ್ದು ಜೂನ್ ತಿಂಗಳಿನಲ್ಲಿ. ಮಾನ್ಯ ಜೆ.ಹೆಚ್. ಪಟೇಲ್‌ರ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ನಾನು ಮಂತ್ರಿಯಾದ ಮೇಲೆ, ಈ ಎರಡೂ ಮೆಡಿಕಲ್ ಕಾಲೇಜುಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡುವುದು ಇನ್ನೂ ಡಿಕ್ಲೇರ್ ಆಗಿಲ್ಲ, ಅದರ ಬೈಲಾವನ್ನು ಅಪ್ರೂವ್ ಮಾಡಿ ಬಿಟ್ಟು ಅದಕ್ಕೆ ಅಟಾನಮಸ್ ಸ್ಟೇಟಸ್ ಕೊಡಬೇಕು ಎಂದು ಹೇಳಿದಾಗ ನಾವು ಜೂನ್ ತಿಂಗಳಿನಲ್ಲೇ ಬೈಲಾವನ್ನು ಅಪ್ರೂವ್ ಮಾಡಿ ಹುಬ್ಬಳ್ಳಿ ಮತ್ತು ಬಳ್ಳಾರಿ ಕಾಲೇಜುಗಳಿಗೆ ನಾವು ಅಟಾನಮಸ್ ಸ್ಟೇಟಸ್ ಅನ್ನು ಕೊಟ್ಟೆವು. ಹುಬ್ಬಳ್ಳಿ ಮತ್ತು ಬಳ್ಳಾರಿ ಕಾಲೇಜುಗಳ ಬೇಡಿಕೆ ಏನಿದೆ, ಅದು ಇವತ್ತು ಅಥವಾ ನಿನ್ನೆಯ ಬೇಡಿಕೆ ಅಲ್ಲ. ಇದು ಬಹಳ ವರ್ಷಗಳಿಂದ ಇರತಕ್ಕದ್ದಾಗಿದೆ. ಅಲ್ಲಿ ಅಧ್ಯಾಪಕರುಗಳು ಇಲ್ಲ, ಮೇಷ್ಟ್ರುಗಳಿಲ್ಲ ಇತ್ಯಾದಿ ಕೊರತೆಗಳನ್ನೆಲ್ಲಾ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಸರ್ಕಾರಕ್ಕೆ ಪಾಯಿಂಟ್ ಔಟ್ ಮಾಡಿ ತೋರಿಸಿದರು. ಬೆಂಗಳೂರು, ಮೈಸೂರಿನಿಂದ ಅಲ್ಲಿಗೆ ಯಾವುದೇ ಅಧ್ಯಾಪಕರನ್ನು ಹಾಕಿದರೂ ಕೂಡ ಅವರು ಅಲ್ಲಿಗೆ ಹೋಗಲಿಕ್ಕೆ ತಯಾರಿರಲಿಲ್ಲ. ಆ ಕಾರಣಕ್ಕಾಗಿ ಅದನ್ನು ಅಟಾನಮಸ್ ಇನ್ಸ್‌ಟಿಟ್ಯೂಟ್ ಎಂದು ಮಾಡಿದರು. ಆದರೆ ಆ ಎರಡೂ ಇನ್ಸ್‌ಟಿಟ್ಯೂಟ್‌ಗಳಿಗೆ ಹಣದಲ್ಲಿ ಸರ್ಕಾರ ಯಾವುದೇ ರೀತಿಯ ಕಡಿತ ಮಾಡಿಲ್ಲ. ಸರ್ಕಾರ ಬಡ್ಜೆಟ್‌ನಲ್ಲಿ ಏನೊಂದು ಹಣವನ್ನು ನಮೂದಿಸಿದೆಯೋ ಅಷ್ಟೂ ಹಣವನ್ನು ಪ್ರತಿ ಕ್ವಾರ್ಟರ್‌ನಲ್ಲಿ ಏನು ರಿಲೀಸ್ ಆಗಬೇಕಾಗಿತ್ತೋ ಅದನ್ನು ಟ್ರೆಜರಿ ಮುಖಾಂತರ ಮಾಡಿದೆ. ಅವರಿಗೆ ಬೈಲಾ ಅಪ್ರೂವ್ ಆಗುವವರೆಗೆ ಅವರಿಗೆ ಸ್ವಾಯತ್ತ ಸಂಸ್ಥೆ ಎಂದು ಹೇಳಲು ಬರುವುದಿಲ್ಲ. ಒಂದು ಸಲ ಗ್ರಾಂಟ್ ಇನ್ ಎಡ್ ಬಂದರೆ ಅವರು ಅದನ್ನು ಬ್ಯಾಂಕಿನಲ್ಲಿಟ್ಟುಕೊಂಡು ಅದನ್ನು ಖರ್ಚು ಮಾಡಬಹುದೇ ಹೊರತು, ಅದು ಬರದಿದ್ದಾಗ ಟ್ರೆಜರಿ ಮುಖಾಂತರ ಹಣ ಬಿಡುಗಡೆಯಾಗುತ್ತದೆ. ಆದರೆ ಅದರ ನಿರ್ದೇಶಕರು ಹೇಳುವುದೇನೆಂದರೆ, ನನಗೆ ಹಣವನ್ನು ಕೊಡಬೇಕು, ಟ್ರೆಜರಿ ಮೂಲಕ ತೆಗೆದುಕೊಳ್ಳುವುದಿಲ್ಲ ಎನ್ನುವಂತಹ ಬೇಡಿಕೆ ಅವರದಾಗಿತ್ತು. ಅದೇನೇ ಇರಲಿ, ನಾಗಲೊತಿಮಠ್ ತಜ್ಞ ವೈದ್ಯರು. He is a renowned pathologist ಅವರು ಒಳ್ಳೆಯ ಪೆಥಾಲಜಿಸ್ಟ್ ಆಗಿದ್ದರು. ನಾವ್ಯಾರೂ ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಆದರೆ ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಏನೊಂದು ಸಮಸ್ಯೆಗಳಿದ್ದವೋ ಅದೇ ಸಮಸ್ಯೆಗಳು ಹುಬ್ಬಳ್ಳಿ ಮೊಡಿಕಲ್ ಕಾಲೇಜಿನಲ್ಲೂ ಇದ್ದವು ತಾವೇನು ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಯಾಯಿತು ಎಂದು ಹೇಳುತ್ತಿದ್ದೀರಿ, ಅವು ಯಾವುವನ್ನೂ ಅವರು ನಮ್ಮ ಗಮನಕ್ಕೆ ಯಾವತ್ತೂ ತಂದಿರಲಿಲ್ಲ. ನಾನು ಅನೇಕ ವೇಳೆ ಅಲ್ಲಿಗೆ ಹೋದಾಗ ಶಾಸಕರನ್ನೂ ಕರೆದು, ಅವರೂ ಇದ್ದಾಗ ಸಭೆಗಳನ್ನು ನಡೆಸಿದ್ದೇನೆ. ಇವರು ಅವತ್ತೇನು ಹೇಳಿದರು ಅಲ್ಲಿ? ಇಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಔಷಧಿಗಳನ್ನು ಸರಿಯಾಗಿ ಕೊಡುತ್ತಿಲ್ಲ, ಆ ವೈದ್ಯರು ಸರಿಯಿಲ್ಲ ಎನ್ನುವಂತಹ ಕುಂದು ಕೊರತೆಗಳೂ ಅವತ್ತೂ ಕೂಡ ಇದ್ದವು. ಆದರೆ ಅವರನ್ನು ಸರ್ಕಾರ ಯಾವತ್ತೂ ಕೂಡ ರಾಜೀನಾಮೆ ಕೊಡಿ ಎಂದು ಕೇಳಿಲ್ಲ. ಅವರಷ್ಟಕ್ಕೆ ಅವರೇ ತಮ್ಮ ರಾಜೀನಾಮೆಯನ್ನು ಸರ್ಕಾರಕ್ಕೆ ಸಲ್ಲಿಸಿದಾಗ ನಾವು ಅದನ್ನು ಅಂಗೀಕಾರ ಮಾಡಲೇಬೇಕಾಗಿತ್ತು ಮತ್ತು ತೆರವಾದ ಸ್ಥಾನಕ್ಕೆ ಬೇರೆಯವರನ್ನು

ನೇಮಿಸಲೇಬೇಕಾಗಿತ್ತು. ಸರ್ಕಾರದ ಅಧಿಕಾರಿಗಳು ಯಾರಾದರೂ ರಾಜೀನಾಮೆ ಕೊಟ್ಟರೆ, ಮಾನ್ಯ ಮುಖ್ಯಮಂತ್ರಿಗಳಾಗಲೀ ಅಥವಾ ಸರ್ಕಾರದ ಕಡೆಯಿಂದ ಇನ್ನಾರಾದರೂ ಹೋಗಿ ಅವರ ಮನವೊಲಿಸಿ ನೀನು ಮತ್ತೆ ಕೆಲಸಕ್ಕೆ ವಾಪಸ್ ಬಾ ಎಂದು ಹೇಳತಕ್ಕಂಥ ಸಂಪ್ರದಾಯವನ್ನು ಪಾಲಿಸುತ್ತಿದ್ದರೆ ನಾವು ಅದನ್ನು ಮಾಡಬಹುದಾಗಿತ್ತು. ಆದರೆ ನಾವು ಯಾವ ಕಾರಣಕ್ಕೂ ಅವರಿಗೆ ನೀವು ರಾಜೀನಾಮೆ ಕೊಡಿ, ನೀವು ಇಂತಹ ಕೆಲಸ ಮಾಡಿಲ್ಲವೆಂದು ಹೇಳಿಲ್ಲ. ಅವರು ಏನೇನು ಕೇಳಿದ್ದರೋ ಅಷ್ಟು ಹಣವನ್ನು, ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಸರ್ಕಾರ ನಿಗದಿ ಮಾಡಿತ್ತೋ ಅಷ್ಟು ಹಣವನ್ನು ನಾವು ಕೊಟ್ಟಿದ್ದೇವೆ. ಅವರು ನನಗೆ ಅಧಿಕಾರ ಇಲ್ಲವೆಂದು ಹೇಳಿದಾಗ, ಜುಲೈ ತಿಂಗಳಿನಲ್ಲಿ ನಾನೇ ಆರೋಗ್ಯ ಕಾರ್ಯದರ್ಶಿಯವರನ್ನು ಕರೆದುಕೊಂಡು ಹೋಗಿ, ಅವರು ನೋಡಪ್ಪ ನಿನಗೆ ಜಿ.ಒ. ಕೊಟ್ಟಿದ್ದೇವೆ, ಬೈಲಾವನ್ನು ಕೊಟ್ಟಿದ್ದೇವೆ, ಇನ್ನು ಮೇಲೆ ನೀನು ಈ ತರಹ ಇದನ್ನು ನಡೆಸಿಕೊಂಡು ಹೋಗಿ ಎಂದು ಹೇಳಿ ಬಂದಿರತಕ್ಕಂತಹ ಅನೇಕ ನಿದರ್ಶನಗಳು ನನ್ನ ಹತ್ತಿರ ಇವೆ. ಅವರು ಮಾಡತಕ್ಕಂಥ ಕೆಲಸವನ್ನು ನಾವು ಯಾವ ತರಹ ಮಾಡಬೇಕೆಂದು ಹೇಳಿ ಕೊಟ್ಟಿದ್ದೇವೆ. ಅದರ ಪೇ ಬಿಲ್ ಆಗಲೀ, ಇನ್ನೊಂದಾಗಲೀ ನಾವು ಹೇಳಿಕೊಟ್ಟಿದ್ದೇವೆ. ಅವರು ಒಳ್ಳೆಯ ವೈದ್ಯರು, ಅದರಲ್ಲಿ ಬೇರೆ ಮಾತೇ ಇಲ್ಲ. ಆದರೆ ಆಡಳಿತ ಅವರಿಗೆ ಗೊತ್ತಿರಲಿಲ್ಲ, ನಾವು ಎಲ್ಲವನ್ನೂ ಅವರಿಗೆ ಹೇಳಿ ಕೊಟ್ಟಿದ್ದೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ : ನಾವು ಅವರನ್ನು ಏನು ಕೇಳುತ್ತಿದ್ದೇವೆ ಎಂದರೆ...

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಮಾನ್ಯ ಮಂತ್ರಿಗಳು ಹೇಳುವುದು ಕೇಳಿ.

(ಗೊಂದಲ)

ಡಾ|| ಎಂ. ಶಂಕರ್ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ನಾನು ನಿಮಗೆ ಒಂದು ನಿದರ್ಶನವನ್ನು ಕೊಡಬೇಕು ಎನ್ನುವುದಾದರೆ, ಹುಬ್ಬಳ್ಳಿ ಆಸ್ಪತ್ರೆಯ ಕ್ಯಾಂಪಸ್‌ನಲ್ಲಿ ಯಾರೋ ಪ್ರೈವೇಟ್‌ನವರಿಗೆ ಮೂರು ಅಂಗಡಿಗಳನ್ನು ಕಟ್ಟಲಿಕ್ಕೆ ಅವರು ಪರ್ಮಿಷನ್ ಅನ್ನು ಕೊಟ್ಟಿದ್ದಾರೆ. ನಾನು ಅಲ್ಲಿಗೆ ಇನ್ಸ್‌ಪೆಕ್ಷನ್ ಹೋಗಿ ಯಾರಿಲ್ಲ ಅಂಗಡಿಗಳನ್ನು ಕಟ್ಟಿಸಿದ್ದಾರೆ ಎಂದು ಕೇಳಿದಾಗ ಪ್ರೈವೇಟ್‌ನವರಿಗೆ ಯಾರಿಗೋ ಕೊಟ್ಟಿದ್ದೇವೆ ಎಂದು ಹೇಳಿದರು. ಆಗ ನಾನು ಇದು ಗೌರ್ನಿಂಗ್ ಕೌನ್ಸಿಲ್ ಜವಾಬ್ದಾರಿ, ನೀವು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಾ? ಎಂದು ಕೇಳಿದೆ. ಆಗ ಅವರು ನಾನು ಇದನ್ನು ಗಮನಕ್ಕೆ ತಂದಿಲ್ಲ ಎಂದರು. ನಾನು ಏಕೆ ತಂದಿಲ್ಲ ಎಂದು ಕೇಳಿದ್ದಕ್ಕೆ ನಿಮ್ಮನ್ನು ಕೇಳುವಂತಹ ಪ್ರಮೇಯವೇ ನಮ್ಮಲ್ಲಿಲ್ಲ ಎಂದು ಹೇಳಿದರು. ನಿಮಗೆ ಆ ರೀತಿ ಯಾರು ಹೇಳಿದರು? ಈ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ಬೈಲಾದಲ್ಲಿ ಇದೆ ಎಂದು ನಮ್ಮ ಕಾರ್ಯದರ್ಶಿ ಅವರಿಗೆ ಓದಿ ಹೇಳಿದರು. ಏನೋ ಈಗ ಈ ರೀತಿ ಮಾಡಿದ್ದೀರಿ, ಇನ್ನಾದರೂ ಹೀಗೆ ಮಾಡುವುದನ್ನು ನಿಲ್ಲಿಸಿ, ನಿಮ್ಮ ಆಸ್ಪತ್ರೆಯಿಂದ ದುಡ್ಡು ಕೊಟ್ಟು ಈ ಅಂಗಡಿಯನ್ನು ಸರ್ಕಾರಿ ಆಸ್ಪತ್ರೆಗಳನ್ನಾಗಿ ಮಾಡಿ, ಖಾಸಗಿ ಮಾಡಬೇಡಿ ಎಂದು ಹೇಳಿದರೆ, ಈ ರೀತಿ ಮಾಡುವುದಕ್ಕೆ ಬರುವುದಿಲ್ಲ ನಾವು ಒಂದು ಕಾಂಗ್ರೆಸ್‌ಗೆ ಕೊಟ್ಟಿದ್ದೇವೆ, ಒಂದು ಬಿ.ಜೆ.ಪಿ.ಗೆ

ಕೊಟ್ಟಿದ್ದೇವೆ, ಮತ್ತೊಂದು ದಳಕ್ಕೆ ಕೊಟ್ಟಿದ್ದೇವೆ ಎಂದು ಹೇಳಿದರು. ಆಗ ನಾನು ಇದು ನಿಮ್ಮ ಕೆಲಸವಲ್ಲ, ಅದನ್ನು ಮಾಡತಕ್ಕವರು ಬೇರೆಯವರಿದ್ದಾರೆ, ನೀವು ಫಸ್ಟ್ ಆಫ್ ಆಲ್ ಅಲ್ಲ ಪರ್ಮಿಷನ್ ಅನ್ನೇ ಕೊಡಬಾರದಿತ್ತು. ಇಂಥದ್ದೆಲ್ಲಾ ಬುದ್ಧಿವಾದ ಅವರಿಗೆ ಹೇಳಿದ್ದೇವೆ. ಅಲ್ಲಿ ಅವರನ್ನು ಕೇಳಿ, ಇವತ್ತೂ ಅಲ್ಲಿ ಅಂಗಡಿಗಳಿವೆ. ಅಲ್ಲಿ ಇವತ್ತೂ ಬಾಡಿಗೆಗೆ ಇದ್ದಾರೆ. ಆದರೆ ನಾವು ಯಾವತ್ತೂ ಅವರನ್ನು ರಾಜೀನಾಮೆ ಕೊಡಿ ಎಂದು ಒತ್ತಾಯಿಸಿಲ್ಲ. ಅವರದೇ ಆದಂತಹ ವೈಯಕ್ತಿಕ ಕಾರಣಗಳಿಂದ ಅವರು ರಾಜೀನಾಮೆ ಕೊಟ್ಟಿದ್ದಾರೆ. ಅವರು ಅದಕ್ಕೆ ಮುಂಚೆ ನಾನು ಅಮೇರಿಕಾಕ್ಕೆ ಹೋಗಬೇಕು, ನನಗೆ 75 ದಿವಸ ರಜೆ ಬೇಕು ಎಂದು ಒಂದು ಕಾಗದವನ್ನು ಬರೆದರು. ಅವರು ಯಾವುದೋ ಒಂದು ಕನ್‌ವೆನ್‌ಷನ್ ಅಟೆಂಡ್ ಮಾಡುವುದಕ್ಕೆ ಆ ರಜೆ ಕೇಳಿದ್ದರು. ನಾವು ಅವರಿಗೆ ಹೇಳಿದೆವು, ಕನ್‌ವೆನ್‌ಷನ್ ಇರುವುದು ಕೇವಲ ಎರಡು ದಿವಸ ಮಾತ್ರ, ನೀವು ಹದಿನೈದು ದಿವಸಗಳಲ್ಲಿ ಹೋಗಿ ಬನ್ನಿ, ನೀವು ಎರಡೂವರೆ ತಿಂಗಳು ರಜೆ ಹೋದರೆ ಈ ಇನ್ಸ್‌ಟಿಟ್ಯೂಷನ್ ಗತಿ ಏನು? ಎಂದು ಹೇಳಿದೆವು. ಆದರೂ ಅವರು ಕೇಳದೇ, ಮಾರನೇ ವಾರದಲ್ಲೇ ಅವರು ಸರ್ಕಾರಕ್ಕೆ ರಾಜೀನಾಮೆಯನ್ನು ಕಳುಹಿಸಿದರು. ಸರ್ಕಾರ ಯಾವತ್ತೂ ಅವರ ರಾಜೀನಾಮೆಯನ್ನು ಕೇಳಿಲ್ಲ. ಅವರಾಗಿ ಅವರೇ ರಾಜೀನಾಮೆ ಕೊಟ್ಟಾಗ ನಾವು ಅಂಗೀಕಾರ ಮಾಡಬೇಕಾಗುತ್ತದೆ, ಆ ಸ್ಥಾನಕ್ಕೆ ಬೇರೆ ನಿರ್ದೇಶಕರನ್ನು ಸಂಸ್ಥೆಯ ಹಿತದೃಷ್ಟಿಯಿಂದ ನೇಮಕ ಮಾಡಲೇಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೇ, ತಾವು ಕೂಡ ಆ ಭಾಗದಿಂದ ಬಂದವರಾಗಿದ್ದೀರಿ. ಇದು ಸ್ವಯುತ್ತ ಸಂಸ್ಥೆ ಆದ ಮೇಲೆ ಸುಮಾರು 80 ಜನ ಆ ಭಾಗದ ವೈದ್ಯರು. ಟ್ಯೂಟರ್ಸ್, ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಅಲ್ಲಿ ಏನು ಹೊರಗಡೆಯಿಂದ ಬರಬೇಕು ಎಂದು ಕೇಳುತ್ತಿದ್ದಾರೆ, ಅವರನ್ನು ನಾವು ಯಾವತ್ತೂ ತೆಗೆದುಕೊಂಡಿಲ್ಲ. ಎಂ.ಸಿ.ಐ. ನವರು ಬಂದು ಇನ್ಸ್‌ಪೆಕ್ಷನ್ ಮಾಡಿಕೊಂಡು ಹೋಗುವವರೆಗೆ, ಅಲ್ಲಿ ಸೀಟುಗಳು ಫಿಕ್ಸ್ ಆಗುವವರೆಗೆ ಯಾರನ್ನೂ ಬಿಡುಗಡೆ ಮಾಡುವುದಿಲ್ಲ ಎಂದು ಹೇಳಿ ಅವರನ್ನು ಅಲ್ಲೇ ಉಳಿಸಿದ್ದೇವೆ. ಎಷ್ಟು ಔಷಧಿಗಳನ್ನು ತೆಗೆದುಕೊಳ್ಳಬೇಕಾಗಿತ್ತು ಅಷ್ಟಕ್ಕೂ ಹಣವನ್ನು ರಿಲೀಜ್ ಮಾಡಿದ್ದೇವೆ. ನಮ್ಮ ಸರ್ಕಾರದವರು ಹೋದ ವರ್ಷ ಐದು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಏನು ಹೇಳಿದ್ದೆವು, ಅದರಂತೆ ಈ ವರ್ಷ ಬಳ್ಳಾರಿ ಮತ್ತು ಹುಬ್ಬಳ್ಳಿಗೆ ಈ ಐದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ಐದು ಕೋಟಿ ರೂಪಾಯಿಗಳಲ್ಲಿ ಕ್ವಾರ್ಟರಲಿ ಏನು ಬರಬೇಕಾಗಿತ್ತು. ಆ ಒಂದು ಮುಕ್ಕಾಲು ಕೋಟಿ ರೂಪಾಯಿಗಳನ್ನು ಈ ವರ್ಷ ರಿಲೀಸ್ ಮಾಡಲಾಗಿದೆ. ಇಷ್ಟೆಲ್ಲಾ ಕೆಲಸವನ್ನು ನಾವು ಮಾಡಿದ್ದು, ನಾವು ಯಾವತ್ತು ಅವರನ್ನು ರಾಜೀನಾಮೆ ಕೊಡಬೇಕೆಂದು ಕಿರುಕುಳವನ್ನು ಕೊಡುವುದಾಗಲಿ ಅಥವಾ ಅವರು ಹೇಳಿದಂತಹ ಮಾನಸಿಕ ಮತ್ತು ದೈಹಿಕ ಹಿಂಸೆ ಎನ್ನುವಂಥಾದ್ದು ಆಗಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ನಾವು ಅವರಿಗೆ ಏನು ಮಾಡಿಲ್ಲ, ಅವರಾಗೆ ರಾಜೀನಾಮೆ ಕೊಡುವಾಗ ಅದನ್ನು ಸರ್ಕಾರ ಅಂಗೀಕಾರ ಮಾಡಿದ್ದು ತಪ್ಪು ಎಂದು ಸದಸ್ಯರು ಎಂದರೆ ಆಗಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಅವರು ಫಾರಿನ್‌ಗೆ ಹೋಗಬೇಕೆಂದು ಕೇಳಿದ್ದು ಅದನ್ನು ಮಿಸ್‌ಲೀಡ್ ಮಾಡಬೇಡಿ. ಫಾರಿನ್‌ನಲ್ಲಿರುವಂತಹ ಮುನ್ನೂರು ಜನರು

ಎನ್.ಆರ್.ಐಗಳಿಂದ ಹುಬ್ಬಳ್ಳಿ ಆಸ್ಪತ್ರೆಗೆ ಏನೇನು ಹಣವನ್ನು ತರಬೇಕೆನ್ನುವಂಥಾದ್ದಕ್ಕೆ ಅವರು ಫಾರಿನ್‌ಗೆ ಹೋಗಲು ಅನುಮತಿಯನ್ನು ಕೇಳಿದ್ದರು. ಅವರು ಈ ವಿಚಾರವೆಲ್ಲವನ್ನು ಸಬ್ಜೆಕ್ಟ್ ಕಮಿಟಿಗೆ ಕೊಟ್ಟರು. ಈ ವಿಚಾರ ನಿಮ್ಮ ಡೈರೆಕ್ಟರ್‌ರವರಿಗೂ ಗೊತ್ತಿದೆ. ಎಲ್ಲ ವಿಷಯಗಳನ್ನು ಅವರು ವಿವರವಾಗಿ ಕೊಟ್ಟಿದ್ದಾರೆ. ಎಷ್ಟೋ ಜನ ಎನ್.ಆರ್.ಐಗಳು ಹುಬ್ಬಳ್ಳಿ ಆಸ್ಪತ್ರೆಗೆ ಹಣವನ್ನು ಕೊಡಲು ಮುಂದೆ ಬಂದಿದ್ದಾರೆ. ಈ ರೀತಿ ಎಪ್ಪತ್ತೈದು ದಿವಸಗಳು ರಜೆ ತೆಗೆದುಕೊಂಡು ಹೋಗುತ್ತಿದ್ದಾರೆಂದು ದಯವಿಟ್ಟು ಮಿಸ್‌ಲೀಡ್ ಮಾಡಬೇಡಿ. ಈ ಸಭೆಯನ್ನು ಸಹ ಮಿಸ್‌ಲೀಡ್ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಅವರು ನಾಲ್ಕು ರೂಮ್‌ಗಳನ್ನು ಕಟ್ಟಿಸಿದ್ದಾರೆಂದು ಹೇಳಿದ್ದಾರೆ. ಅವರು ಅದನ್ನು ಏಕೆ ಕಟ್ಟಿದರು. ಅಲ್ಲಿ ರೋಗಿಗಳಿಗೆ ಬೇಕಾದಂತಹ ಹಾಲು, ತಂಪು ಪಾನೀಯ, ಟೆಲಿಫೋನ್ ಬೂತ್ ಈ ರೀತಿಯ ವ್ಯವಸ್ಥೆಯನ್ನು ಮಾಡಿದರು. ಅವರೇನು ಲಾಭ ಮಾಡಿಕೊಳ್ಳಲು ಹೊರಟಿದ್ದಾರೆಯೇ ಅವರು ಆ ನಾಲ್ಕು ಮಳಿಗೆಗಳನ್ನು ಕಟ್ಟಿದ್ದೆ ಒಂದು ಸಣ್ಣ ಕ್ಷುಲ್ಲಕ ಕಾರಣವನ್ನಿಟ್ಟುಕೊಂಡು, ಹೊರದೇಶಗಳಿಗೆ ಹೋಗುವಂತಹ ನೆಪವನ್ನಿಟ್ಟುಕೊಂಡು, ಅವರಿಗೆ ಬೇಕಾದಂತಹ ಸವಲತ್ತುಗಳನ್ನು ಒದಗಿಸದೇ ಅವರನ್ನು ಮಾನಸಿಕ ಹಿಂಸೆಗೆ ಗುರಿಮಾಡಿ, ಉತ್ತರ ಕರ್ನಾಟಕದ ಆ ಭಾಗದ ಜನರಿಗೆ ಇಂತಹ ಒಬ್ಬ ಡಾಕ್ಟರ್‌ರಿಂದ ಒಳ್ಳೆಯ ಟ್ರೀಟ್‌ಮೆಂಟ್ ಸಿಗುತ್ತಾ ಇತ್ತು ಮತ್ತು ಇದನ್ನು ಸುದಾರಣೆ ಮಾಡುತ್ತಿದ್ದದ್ದು ತಮಗೆ ಗೊತ್ತಿದೆ. ಇಷ್ಟು ಆದಮೇಲೂ ನಿಮಗೆ ಇಂಥವರು ಸರ್ವೀಸ್ ಮಾಡುವ ಅಗತ್ಯವಿಲ್ಲವೆಂದು ಅವರು ರಾಜೀನಾಮೆಯನ್ನು ಕೊಟ್ಟು ಹೋಗುವಂತಹ ಉಸಿರು ಕಟ್ಟುವಂತಹ ಸ್ಥಿತಿಗೆ ತಾವು ತಂದಿದ್ದರಿಂದ ಇವತ್ತು ಅವರು ರಾಜೀನಾಮೆಯನ್ನು ಕೊಟ್ಟರು. ನಾವು ಅವರನ್ನು ಕರೆಯುವುದಕ್ಕೆ ಆಗುತ್ತದೆಯೇ? ಎಂದು ಹೇಳಿದರೆ ನಾವು ಏನು ಅವರಿಗೆ ಉಪಕಾರ ಮಾಡಿ ಎಂದು ಹೇಳುತ್ತಾ ಇಲ್ಲ. ಅಂಥವರ ಸರ್ವೀಸ್ ಕೆಳಿದುಕೊಂಡ ಆ ಭಾಗದ ಜನರಿಗೆ ಈ ದು:ಸ್ಥಿತಿಯನ್ನು ಈ ಬೇಜವಾಬ್ದಾರಿ ಸರ್ಕಾರ ತಂದಿತಲ್ಲಾ, ಎಂಬ ಮಾತನ್ನು ಹೇಳುತ್ತೇವೆಯೇ ಹೊರತು ಅವರಿಗೆ ಬದುಕುವುದಕ್ಕೆ ದಾರಿ ಇದೆ. ಈಗಲೂ ನಿಮಗೆ ಏನಾದರೂ ಜವಾಬ್ದಾರಿ ಇದ್ದರೆ ನಿಮ್ಮವರನ್ನು ಕೇಳಿ, ಅವರ ಬಗ್ಗೆ ಗೌರವವಿತ್ತು, ಅಂತಹ ವ್ಯಕ್ತಿ ಎಂದು ಕಂಡರೆ ಅವರನ್ನು ಪುನರ್ ನೇಮಕ ಮಾಡುವಂತಹ ಪ್ರಯತ್ನವನ್ನು ಮಾಡಿ ಇಲ್ಲದಿದ್ದರೆ ತಮಗೆ ಬಿಟ್ಟಿದ್ದು. ನಿಮ್ಮ ಸರ್ಕಾರದ ನೀತಿ ಏನೆಂಬುದು ಜಗತ್ತಿಗೆ ಗೊತ್ತಾಗಲಿ.

(ಗೊಂದಲ)

ಡಾ|| ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೆ, ಇವರಿಗೆ ಎಷ್ಟು ಕಾಳಜಿ ಇದೆಯೋ, ನಮಗೂ ಅಷ್ಟೇ ಇದೆ. ಅಲ್ಲ ಏನಾಗಿದೆ ಎಂದರೆ ಸುಮಾರು 5-6 ವರ್ಷಗಳ ಹಿಂದೆ ಕ್ಯಾಂಪಸ್ ಒಳಗಡೆ ಪ್ರೈವೇಟ್‌ನವರು ಒಂದು ಕ್ಯಾಂಟೀನ್ ಕಟ್ಟಿದರು, ಅಲ್ಲಿ ಒಂದು ಪುಸ್ತಕ ಅಂಗಡಿಯನ್ನು ಇಟ್ಟರು. ಈಗ ಅವರು ಈ ಪ್ರಾಪರ್ಟಿ ನನ್ನದೆ ಎಂದು ಕ್ಲೈಮ್ ಮಾಡುತ್ತಿದ್ದಾರೆ. ಇವತ್ತು ಅವರನ್ನು ಬಿಡುವಂತಹ ಪ್ರಯತ್ನ ಮಾಡಿದಾಗ ಅವರು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಅದನ್ನು ಎಲ್ಲರೂ ನೋಡಿದ್ದೀರಿ, ಫ್ರಂಟ್ ಎಂಟ್ರೆನ್ಸ್ ಜಾಗ ನನ್ನದೇ ಎಂದು ಕ್ಲೈಮ್ ಮಾಡುತ್ತಿದ್ದಾರೆ.

ಇವತ್ತು ಆಸ್ಪತ್ರೆಗೆ ಸಂಸ್ಥೆಯಿಂದ ಹಣವನ್ನು ಹಾಕಿ ಸರ್ಕಾರದಿಂದ ಕಟ್ಟಡ ಕಟ್ಟಿಸಿ ಅದನ್ನು ಬಾಡಿಗೆಗೆ ಕೊಡುತ್ತೇವೆ. ಆದರೆ ಬೇರೆಯವರು ಬಂದು ಅಲ್ಲಿ ಅಂಗಡಿಯನ್ನು ಮಾಡಿ ಈಗ ಜಾಗ ನಮ್ಮದೇ ಎಂದು ಕ್ಲೈಮ್ ಮಾಡಿದಾಗ ಅವರನ್ನು ಮಧ್ಯದಲ್ಲಿ ಹೇಗೆ ತಪ್ಪಿಸುವುದಕ್ಕಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಒಂದು ಸಣ್ಣ ಅಂಗಡಿ ಅದು ರೋಗಿಗಳ ಅನುಕೂಲಕ್ಕೋಸ್ಕರ ಮಾಡಿದ್ದುದು, ಇವತ್ತು ಬಹಳ ಉತ್ತಮವಾದಂತಹ ವೈದ್ಯರು ಅಂಥವರನ್ನು ಮನೆಗೆ ಕಳುಹಿಸುತ್ತೇವೆಂದರೆ ಇದು ಒಂದು ನಾಚಿಕೆಗೇಡಿನ ಸರ್ಕಾರವೆಂದು ನಾನು ಹೇಳುತ್ತೇನೆ. ಉತ್ತರ ಕರ್ನಾಟಕಕ್ಕೆ ಸರ್ಕಾರ ಅನ್ಯಾಯ ಮಾಡುವುದಕ್ಕೆ ಹೊರಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಅವರ ಮನವೊಲಿಸಿ ಪುನರ್‌ನೇಮಕ ಮಾಡುವುದಕ್ಕೆ ನಿಮ್ಮ ಉತ್ತರವೇನು? ಇದರ ಬಗ್ಗೆ ನೀವು ನೇರವಾಗಿ ಉತ್ತರವನ್ನು ಕೊಡಿ.

ಡಾ॥ ಎಂ. ಶಂಕರ್‌ನಾಯಕ್ : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಗೌರ್ನಿಂಗ್ ಕೌನ್ಸಿಲ್‌ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ನಾವು ಮತ್ತೆ ನಿರ್ದೇಶಕರು ಬೇಕೆಂದು ಜಾಹೀರಾತು ಕೊಟ್ಟಿದ್ದೇವೆ. ಅವರ ಅಗತ್ಯವಿದೆ, ಎಂದು ಗೌರ್ನಿಂಗ್ ಕೌನ್ಸಿಲ್‌ನವರು ಅವರ ಸೇವೆ ಮತ್ತೆ ಅಗತ್ಯವಿದೆ ಎಂದು ಕಂಡುಬಂದಲ್ಲಿ ನಾವು ಅವರನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂದರೆ ಅವರ ಅಗತ್ಯವಿದೆ ಎಂದು ಕಂಡು ಬಂದರೆ, ಈಗ ನಿಮಗೆ ಇದುವರೆಗೆ ಅಗತ್ಯವಿದೆ ಎಂದು ಅನಿಸಿಲ್ಲ.

ಡಾ॥ ಎಂ. ಶಂಕರ್ ನಾಯಕ್ : ಮಾನ್ಯ ಉಪಾಧ್ಯಕ್ಷರೆ, ನಾವು ಹೇಳಿದ್ದು, ಗೌರ್ನಿಂಗ್ ಕೌನ್ಸಿಲ್‌ನಲ್ಲಿ ಏನು ತೀರ್ಮಾನವಾಗುತ್ತದೆಯೋ ಅದೇ ಅಂತಿಮ ತೀರ್ಮಾನವಾಗುತ್ತದೆ. ಅದು ಗೌರ್ನಿಂಗ್ ಕೌನ್ಸಿಲ್‌ನ ಅಡಿಯಲ್ಲಿ ನಡೆಯಬೇಕಾಗುತ್ತದೆ.

(ಗೊಂದಲ)

ಶ್ರೀ ಚಂದ್ರಕಾಂತ ಬೆಲ್ಲದ್ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಸಣ್ಣ ವಿಚಾರವನ್ನು ತಮ್ಮ ಮೂಲಕ ಸನ್ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ. ಇಂತಹ ಒಬ್ಬ ಖ್ಯಾತಿವೆತ್ತ ಡಾಕ್ಟರ್‌ರವರು ಅಲ್ಲಿಗೆ ಬಂದರು. ಅನೇಕ ಜನ ಡಾಕ್ಟರ್‌ಗಳು ಅಲ್ಲಿ ಇವತ್ತು ಅವಕಾಶವನ್ನು ಪಡೆದರು. ಅಲ್ಲಿ ಖಾಲಿ ಇದ್ದಂತಹ ಡಾಕ್ಟರ್‌ಗಳ ಹುದ್ದೆಗಳು ಭರ್ತಿಯಾದವು. ಒಬ್ಬ ಡಾಕ್ಟರ್‌ರವರ ನೇತೃತ್ವದಲ್ಲಿ ಈ ದವಾಖಾನೆ ಬೆಳೆಯುತ್ತದೆಯೇ, ಏನೋ? ಎನ್ನುವ ದೃಷ್ಟಿಯಿಂದ ಮತ್ತು ಅವರು ಈ ಅಂಗಡಿಗಳನ್ನು ಕಟ್ಟಿಸಿದ್ದು ಅವರ ಸ್ವಂತಕ್ಕೆ ಅಲ್ಲ. ಅವರು ಅದನ್ನು ಜನರ ಸೇವೆ ಮಾಡಲೆಂದು ಮಾಡಿದರು. ನಾನು ಈಗ ಇಷ್ಟನ್ನು ಕೇಳುತ್ತಿದ್ದೇನೆ. ಯಾವಾಗ ಇವರು ರಾಜೀನಾಮೆಯನ್ನು ಕೊಟ್ಟರು ಆಗ ಜಿಲ್ಲಾ ಉಸ್ತುವಾರಿ ಮಂತ್ರಿಯವರು, ಜಿಲ್ಲಾ ಶಾಸಕರು ಈ ವಿಚಾರವನ್ನು ಪರಿಶೀಲಿಸಬೇಕಾಗಿತ್ತು. ಅವರನ್ನು ಏಕೆ ತೆಗೆದರು ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಾನು ಕೆ.ಎಂ.ಸಿಯ ಈ ಘಟನೆ ನೆಡೆದ ನಂತರ ಅಲ್ಲಿ ಅವರ ವಿರುದ್ಧ ಜನ ಸತ್ಯಾಗ್ರಹ ಕುಳಿತರು. ಆಗ ನಾವು ಎಲ್ಲಾ ಎಂ.ಎಲ್.ಎಗಳನ್ನು ಕರೆದು ಮೀಟಿಂಗ್ ಮಾಡಿದ್ದು, ಅವರಿಗೂ ಗೊತ್ತಿದೆ. ಅವರು ಒಬ್ಬ ಒಳ್ಳೆಯ ಡಾಕ್ಟರ್ ಆದರಲ್ಲಿ ಯಾವ ತಕರಾರು ಇಲ್ಲ, ಅವರು ಬಹಳ ಚೆನ್ನಾಗಿ ಕೆ.ಎಂ.ಸಿ.ಯನ್ನು ನಡೆಸುತ್ತಿದ್ದರು. ಅಲ್ಲಿ ಎಕಾಏಕಿ ಎಲ್ಲಾ ನೌಕರರು ಎದುರು ಬಿದ್ದಮೇಲೆ ಅವರು ರಾಜೀನಾಮೆಯನ್ನು ಕೊಟ್ಟರು. ಅವರು ಸರ್ಕಾರದ ತೊಂದರೆಯಿಂದ ರಾಜೀನಾಮೆಯನ್ನು ಕೊಟ್ಟಿಲ್ಲ. ಅದು ಸುಳ್ಳು, ಅದನ್ನು ನಾನು ಒಪ್ಪುವುದಿಲ್ಲ. ಇದು ನನಗೂ ಗೊತ್ತಿದೆ ಮತ್ತು ತಮಗೂ ಗೊತ್ತಿದೆ. ಅಲ್ಲಿ ಏನಾಯಿತೆಂದರೆ ಅವರು ಬಹಳ ಬಿಗಿ ಮಾಡಿದರು, ಎಲ್ಲ ನಿಲ್ಲಿಸಿದರು. ಇದರಿಂದ ಕೆಲವರು ಒಳಗಿನವರು, ಹೊರಗಿನವರು ಕೂಡಿಕೊಂಡರು. ಅವರನ್ನು ಅಲ್ಲಿನ ವ್ಯವಸ್ಥೆಯನ್ನು ಬಿಟ್ಟು ಹೋಗುವ ಹಾಗೆ ಮಾಡಿದರು. ಅವರು ಸರ್ಕಾರದಿಂದ ಏನು ಬಿಟ್ಟು ಹೋಗಿಲ್ಲ. ಅವರು ರಾಜೀನಾಮೆಯನ್ನು ಕೊಟ್ಟು ಹೋದಮೇಲೆ ನಾನು ಹೋಗಿ ಎಲ್ಲರನ್ನೂ ಕರೆದು ಕುಳಿತುಕೊಂಡು ಹೀಗೆ ಮಾಡುವುದಕ್ಕೆ ಬಿಡಬೇಡಿ. ನಾವು ನೋಡಿಕೊಳ್ಳುತ್ತೇವೆ, ನೀವು ಮೊದಲು ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದೆವು. ಅದಕ್ಕೆ ಅವರು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ಅದಕ್ಕೆ ನಾವು ಏನು ಮಾಡೋಣ? ನಾವು ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ, ಆದರೂ ಅವರು ತೆಗೆದುಕೊಂಡಿಲ್ಲ, ಅದಕ್ಕೆ ನಾವು ಏನು ಮಾಡುವುದಕ್ಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಯವರು ಗೌರ್ನಿಂಗ್ ಕೌನ್ಸಿಲ್‌ನವರು ಬೇಕೆಂದರೆ ಪುನರ್ ನೇಮಕ ಮಾಡೋಣವೆಂದರು. ಅವರು ರಾಜೀನಾಮೆಯನ್ನು ಕೊಟ್ಟಾಗ ಅದನ್ನು ನೀವು ಗೌರ್ನಿಂಗ್ ಕೌನ್ಸಿಲ್‌ಗೆ ಕಳುಹಿಸಿದ್ದೀರೋ? ಅಂದರೆ ಅಂತಹ ವ್ಯಕ್ತಿ ಆಸ್ಪತ್ರೆಯಲ್ಲಿರುವುದು ಇಷ್ಟವಿರಲಿಲ್ಲ. ಮಾನಸಿಕವಾಗಿ ಹಿಂಸೆಯನ್ನು ಕಿರುಕುಳವನ್ನು ಕೊಟ್ಟು ಅವರು ರಾಜೀನಾಮೆ ಕೊಡಬೇಕೆಂಬುದು ಇತ್ತು. ಆ ರೀತಿಯ ವಾತಾವರಣವನ್ನು ನೀವು ಸೃಷ್ಟಿ ಮಾಡಿದ್ದೀರಿ. ನೀವು ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತೇವೆ. ನೀವು ಅದು ಏನು ನಡೆಸುತ್ತೀರೋ ನಡೆಸಿಕೊಳ್ಳಿ

(ಈ ಹಂತದಲ್ಲಿ ಬಿ.ಜೆ.ಪಿ.ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ 18ನೇ ತಾರೀಖು ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 18ನೇ ಆಗಸ್ಟ್ ಮಾಹೆ 1997ರ ಸೋಮವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.